School Leadership

TESS India

# Orientation: the elementary school leader as enabler

## ಪರಿಚಯ:ಪ್ರಾಥಮಿಕ ಶಾಲಾ ನಾಯಕ/ಕಿ ಒಬ್ಬ ಸಾಧ್ಯವಾಗಿಸುವವರಾಗಿ/ಪ್ರೋತ್ಸಾಹಕಾರರಾಗಿ (enabler)





Teacher Education through School-based Support in India
www.TESS-India.edu.in

The Open University

UKaid from the British people

CC BY SA
http://creativecommons.org/licenses/

ಶಾಲಾ ನಾಯಕತ್ವಕ್ಕೆ ಸಂಬಂಧಿಸಿದ ಈ **ಮುಕ್ತ ಶೈಕ್ಷಣಿಕ ಸಂಪನ್ಮೂಲವು (Open Educational Resource-OER)** ಶಾಲೆಯಲ್ಲಿ ಬೋಧನೆ ಮತ್ತು ಕಲಿಕೆಯಲ್ಲಿ ಸುಧಾರಣೆ ತರುವ ಬಗ್ಗೆ ನಾಯಕತ್ವ ವಹಿಸಲು ಇಚ್ಛಿಸುವವರಿಗೆ, ಅದಕ್ಕೆ ಪೂರಕವಾಗಿ ಮಾಹಿತಿ ಹಾಗೂ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಸಹಾಯವಾಗುವಂತೆ **ಟೆಸ್-ಇಂಡಿಯಾ ಸಂಸ್ಥೆ** ರೂಪಿಸಿರುವ 20 ಘಟಕಗಳಲ್ಲಿ ಒಂದು. ಶಾಲೆಯಲ್ಲಿ ಶಿಕ್ಷಕರು, ವಿದ್ಯಾರ್ಥಿಗಳ ಹಾಗೂ ಇತರರ ಭಾಗವಹಿಸುವಿಕೆಯಿಂದ ನಡೆಸಬಹುದಾದ ಚಟುವಟಿಕೆಗಳನ್ನು ಒಳಗೊಂಡಿರುವ, ಅವಶ್ಯವಾಗಿ ಪ್ರಯೋಗಿಸಬಹುದಾದ ಘಟಕಗಳನ್ನು ಇದು ಹೊಂದಿದೆ. ಯಶಸ್ವಿ ಶಾಲೆಗಳಲ್ಲಿ ನಡೆಸಲಾದ ಶೈಕ್ಷಣಿಕ ಅಧ್ಯಯನ ಹಾಗೂ ಸಂಶೋಧನೆಗಳನ್ನು ಇದು ಆಧರಿಸಿದೆ.

ಈ ಘಟಕಗಳನ್ನು ಅಧ್ಯಯನ ಮಾಡಲು ಯಾವುದೇ ನಿರ್ದಿಷ್ಟ ಕ್ರಮ ಅನುಸರಿಸಬೇಕಿಲ್ಲವಾದರೂ, ಅನುಕೂಲಿಸುವವರಾಗಿ (enabler) **'ಶಾಲಾ ಮುಖ್ಯಸ್ಥ'** ಎಂಬ ಘಟಕದಿಂದ ಪ್ರಾರಂಭಿಸುವುದು ಸೂಕ್ತ. ಏಕೆಂದರೆ, ಇದು ಇಡೀ ಕೈಪಿಡಿಗೆ ಒಂದು ನಿರ್ದಿಷ್ಟ ನಿರ್ದೇಶನ ನೀಡುತ್ತದೆ. ಕೆಲವು ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದಂತೆ ಘಟಕಗಳನ್ನು ಬೇರ್ಪಡಿಸಿ ಅಧ್ಯಯನ ಮಾಡಲು ನೀವು ಆಯ್ಕೆ ಮಾಡಿಕೊಳ್ಳಬಹುದು. **ರಾಷ್ಟ್ರೀಯ ಶಾಲಾ ನಾಯಕತ್ವದ ಪಠ್ಯಕ್ರಮದ ನೆಲೆಗಟ್ಟು (National School leadership Curriculum Framework-India)** ಗುರುತಿಸಿರುವ ಶಾಲಾ ನಾಯಕತ್ವದ ಯಥಾರ್ಥದರ್ಶನ (1), ಸ್ವಯಂ ಅಭಿವೃದ್ಧಿ ಹಾಗೂ ನಿರ್ವಹಣೆ (2), ಬೋಧನೆ-ಕಲಿಕೆ ಪ್ರಕ್ರಿಯೆಗಳಲ್ಲಿ ಪರಿವರ್ತನೆ (3) ಹಾಗೂ ಪಾಲುದಾರಿಕೆಯಲ್ಲಿ ಅಗ್ರಗಾಮಿ (6)- ಈ ಪ್ರಮುಖ ಕ್ಷೇತ್ರಗಳನ್ನು ನಾವೀನ್ಯತೆ ಹಾಗೂ ತಂಡಗಳನ್ನು ಮುನ್ನಡೆಸುವುದಕ್ಕೆ ಸಂಬಂಧಿಸಿದ (4) ಮತ್ತು (5)ನೇ ಕ್ಷೇತ್ರಗಳನ್ನು ಕೇಂದ್ರೀಕರಿಸದೆ, ವಿವಿಧ ಘಟಕಗಳಲ್ಲಿ ಮಿಳಿತಗೊಳಿಸಲಾಗಿದೆ. ಕೆಲವು ಘಟಕಗಳಲ್ಲಿ ಒಂದಕ್ಕಿಂತ ಹೆಚ್ಚು ಕ್ಷೇತ್ರಗಳನ್ನು ವಿವರಿಸಲಾಗಿದೆ.

ಶಾಲೆಯ ಮುಖ್ಯಸ್ಥರು ಈ ಘಟಕಗಳನ್ನು ಸ್ವಅಧ್ಯಯನಕ್ಕಾಗಿ ಇಲ್ಲವೇ ನಾಯಕತ್ವ ಬೋಧನೆ ಕಾರ್ಯಕ್ರಮದ ಭಾಗವಾಗಿ ಬಳಸಬಹುದು. ಎರಡೂ ವಿಧಾನಗಳಲ್ಲಿ ಚಟುವಟಿಕೆಗಳನ್ನು ಹಾಗೂ ವಸ್ತುಸ್ಥಿತಿ ಅಧ್ಯಯನಗಳನ್ನು ಹಾಗೂ ಕಲಿಕೆಯ ಅನುಭವಗಳನ್ನು ಇತರರೊಡನೆ ಹಂಚಿಕೊಳ್ಳುವ ದೃಷ್ಟಿಯಿಂದ, ವೈಯುಕ್ತಿಕವಾಗಿ ಒಂದು ಕಲಿಕಾ ಡೈರಿಯನ್ನು ಇಟ್ಟುಕೊಳ್ಳುವುದು ಉಪಯುಕ್ತವಾಗುತ್ತದೆ. ಇಲ್ಲಿ ಬಳಸಲಾಗಿರುವ **'ಶಾಲಾಮುಖ್ಯಸ್ಥ'** ಅಥವಾ **'ಶಾಲಾ ನಾಯಕ'** ಎಂಬ ಪದವು ಕೇವಲ ಮುಖ್ಯ ಶಿಕ್ಷಕ ಅಥವಾ ಪ್ರಿನ್ಸಿಪಾಲರು ಮಾತ್ರವಲ್ಲದೆ, ಶಾಲೆಯಲ್ಲಿ ನಾಯಕತ್ವದ ಜವಾಬ್ದಾರಿಯನ್ನು ಹೊರಲು ಸಿದ್ಧವಿರುವ ಯಾವುದೇ ವ್ಯಕ್ತಿಗೆ ಅನ್ವಯಿಸುತ್ತದೆ.

**ವೀಡಿಯೋ ಸಂಪನ್ಮೂಲಗಳು**

ಎಂಬ ಗುರುತು **ಟೆಸ್-ಇಂಡಿಯಾ** ನಾಯಕತ್ವದ ವೀಡಿಯೋ ಸಂಪನ್ಮೂಗಳನ್ನು ಸೂಚಿಸುತ್ತದೆ. ಇವುಗಳಲ್ಲಿ ಭಾರತೀಯ ಶಾಲೆಗಳ ಮುಖ್ಯಸ್ಥರು ತಮ್ಮ ಶಾಲೆಗಳಲ್ಲಿ ಬೋಧನೆ ಹಾಗೂ ಕಲಿಕೆಯಲ್ಲಿ ಬದಲಾವಣೆ ತರಲು ತಾವು ನಡೆಸಿದ ಪ್ರಯತ್ನಗಳ ಬಗ್ಗೆ ಹೇಳಿಕೊಂಡಿದ್ದಾರೆ. ಅಂಥದ್ದೇ ಕಾರ್ಯಕ್ರಮಗಳನ್ನು ನೀವೂ ಪ್ರಯೋಗಿಸುವ ನಿಟ್ಟಿನಲ್ಲಿ ಈ ವೀಡಿಯೊಗಳು ನಿಮಗೆ ಸ್ಫೂರ್ತಿ ನೀಡಬಹುದು ಎಂದು ನಿರೀಕ್ಷಿಸಲಾಗಿದೆ. ಈ ವೀಡಿಯೊಗಳು ಪಠ್ಯದಲ್ಲಿ ನೀಡಲಾಗಿರುವ ಮಾಹಿತಿಗಳಿಗೆ ಪೂರಕವಾಗಿದ್ದು ನಿಮಗೆ ನೆರವಾಗುತ್ತವೆಯಾದರೂ, ಅವುಗಳ ನೆರವು ದೊರಕದೇ ಹೋದರೂ ಸಮಸ್ಯೆ ಯಾಗದಂತೆ ಅವಶ್ಯಕ ಮಾಹಿತಿಯನ್ನು ಪಠ್ಯದಲ್ಲಿ ಸೇರಿಸಲಾಗಿದೆ.

ಟೆಸ್ ಇಂಡಿಯಾ ವೀಡಿಯೋ ಸಂಪನ್ಮೂಲಗಳನ್ನು http://www.tess-india.edu.in ಎಂಬ ವೆಬ್‌ಸೈಟ್‌ನಲ್ಲಿ ನೇರವಾಗಿ ನೋಡಬಹುದು ಇಲ್ಲವೇ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇಲ್ಲವೇ ಮೆಮೋರಿ ಕಾರ್ಡ್ ಅಥವಾ ಸಿಡಿಯ ಮೂಲಕ ಪಡೆಯಬಹುದು.

**ಟೆಸ್-ಇಂಡಿಯಾ (Teacher Education through School based Support) ಯೋಜನೆಯ ಬಗ್ಗೆ**

ವಿದ್ಯಾರ್ಥಿ-ಕೇಂದ್ರಿತ ಹಾಗೂ ವಿದ್ಯಾರ್ಥಿಗಳನ್ನು ಒಳಗೊಂಡ ಕಲಿಕಾ ಪದ್ಧತಿಯನ್ನು ಅಭಿವೃದ್ಧಿ ಪಡಿಸಿಕೊಳ್ಳಲು ಮುಕ್ತ ಶೈಕ್ಷಣಿಕ ಸಂಪನ್ಮೂಲಗಳನ್ನು ಒದಗಿಸುವ ಮೂಲಕ ಪ್ರಾಥಮಿಕ ಹಾಗೂ ಪ್ರೌಢಶಾಲಾ ಹಂತದ ಶಿಕ್ಷಕರಿಗೆ ಮತ್ತು ಶಾಲಾ ಮುಖ್ಯಸ್ಥರಿಗೆ ನೆರವಾಗುವುದು **ಟೆಸ್-ಇಂಡಿಯಾದ** ಉದ್ದೇಶ. ಭಾಷೆ, ವಿಜ್ಞಾನ ಹಾಗೂ ಗಣಿತ ಕಲಿಕೆಯಲ್ಲಿ ಪಠ್ಯಪುಸ್ತಕಕ್ಕೆ ಪೂರಕವಾಗಿ ಸಿದ್ಧಪಡಿಸಲಾರುವ **105 ಟೆಸ್-ಇಂಡಿಯಾ ಒಇಆರ್(OER)ಗಳು** ಈ ನಿಟ್ಟಿನಲ್ಲಿ ಶಿಕ್ಷಕರಿಗೆ ನೆರವಾಗಲಿವೆ. ತಮ್ಮ ವಿದ್ಯಾರ್ಥಿಗಳಿಗೆ ತರಗತಿಯಲ್ಲಿ ಮಾಡಿ ತೋರಿಸಬಹುದಾದ ಚಟುವಟಿಕೆಗಳನ್ನು ಒದಗಿಸುವುದರ ಜೊತೆಗೆ, ಬೇರೆ ಬೇರೆ ಶಾಲೆಗಳಲ್ಲಿ ಶಿಕ್ಷಕರು ಹೇಗೆ ಈ ವಿಧಾನವನ್ನು ಅನುಸರಿಸುತ್ತಿದ್ದಾರೆ ಎಂಬ ವಸ್ತುಸ್ಥಿತಿ ಅಧ್ಯಯನಗಳನ್ನೂ ಇವು ಒಳಗೊಂಡಿವೆ. ಅಲ್ಲದೆ, ತಮ್ಮ ವಿಷಯ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಹಾಗೂ ಪಾಠಯೋಜನೆಗಳನ್ನು ರಚಿಸಲು ಶಿಕ್ಷಕರಿಗೆ ನೆರವಾಗುವ ಸಂಪನ್ಮೂಲಗಳ ಮಾಹಿತಿ ಕೊಂಡಿ (link)ಗಳನ್ನು ಒಳಗೊಂಡಿದೆ.

ನಮ್ಮ ದೇಶದ ಪಠ್ಯಕ್ರಮವನ್ನು ಅನುಸರಿಸಿ, ಭಾರತೀಯ ಹಾಗೂ ಅಂತರರಾಷ್ಟ್ರೀಯ ಲೇಖಕರಿಂದ ಸಂಯುಕ್ತವಾಗಿ ಸಿದ್ಧಪಡಿಸಲಾಗಿರುವ ಈ ಸಂಪನ್ಮೂಲಗಳು **http://tess-indiaedu.in** ವೆಬ್‌ಸೈಟಿನಲ್ಲಿ ಅಧ್ಯಯನ ಮಾಡಲು ಇಲ್ಲವೇ ಡೌನ್‌ಲೋಡ್ ಮಾಡಿಕೊಳ್ಳಲು ಮುಕ್ತವಾಗಿ ದೊರಕುತ್ತವೆ. ಭಾರತದ ವಿವಿಧ ರಾಜ್ಯಗಳ ಬಳಕೆದಾರರಿಗೆ ಅನುಕೂಲವಾಗುವಂತೆ ಸಂಪನ್ಮೂಲ ವಿವಿಧ ವರ್ಷನ್‌ಗಳನ್ನು ಹೊಂದಿದೆ. ಸ್ಥಳೀಯ ಮಾಹಿತಿ ಹಾಗೂ ಅವಶ್ಯಕತೆಗಳಿಗೆ ಅನುಗುಣವಾಗಿ ಸಂಪನ್ಮೂಲಗಳನ್ನು ಹೊಂದಿಸಿಕೊಳ್ಳುವಂತೆ ಶಿಕ್ಷಕರನ್ನು ಕೋರಲಾಗಿದೆ. ಯುಕೆ ಸರ್ಕಾರದ ಅನುದಾನದಲ್ಲಿ, ಯುಕೆಯ ಮುಕ್ತವಿಶ್ವವಿದ್ಯಾಲಯದಲ್ಲಿ **ಟೆಸ್-ಇಂಡಿಯಾ** ರೂಪುಗೊಂಡಿದೆ.

*Version 2.0 SL01v1*
*Karnataka*

*Except for third party materials and othe errwwise stated, this content is made available unde err a Creative Commons Attribution-ShareAlike licence: http://creaattivecommons.org/licenses/by-sa/3.0/*

*TESS-India is led by The Open University UK and funded by UK aid from the UK government*

# ಈ ಘಟಕದ ಬಗ್ಗೆ ಎರಡು ಮಾತು

ಇತ್ತೀಚಿನ ವರ್ಷಗಳಲ್ಲಿ ಭಾರತದ ಶೈಕ್ಷಣಿಕ ನೀತಿಯನ್ನು ಬಹಳ ಬದಲಾವಣೆಯಾಗುತ್ತಿದೆ. ಆದರೆ ಅತ್ಯಂತ ಮಹತ್ತರವಾದ ಬದಲಾವಣೆಗಳಲ್ಲಿ ಒಂದೆಂದರೆ, ಶಾಲೆಗಳ ಪಾತ್ರದಲ್ಲಿ, ಆಶೊತ್ತರಗಳಲ್ಲಿ ಆಗಿರುವ ತಿರುವು. ಈಗಿನ ಬದಲಾವಣೆಯ ಒಂದು ಹೆಗ್ಗುರಿಯೆಂದರೆ ಶಾಲೆಗಳು ಹೆಚ್ಚೆಚ್ಚು ಸ್ವಾಯತ್ತತೆ ಹೊಂದಿ, ಸ್ಥಳೀಯ ಸಮುದಾಯಗಳ ಆಶೋತ್ತರಗಳಿಗೆ ಸ್ಪಂದಿಸಬೇಕು, ಎಂಬುದು. ಹಾಗೂ ಶಾಲಾ ನಾಯಕರು ಶಾಲೆಯಲ್ಲಿನ ಭೋದನೆ ಹಾಗೂ ಕಲಿಕೆಯ ಗುಣಮಟ್ಟದ ಬಗ್ಗೆ ಹೆಚ್ಚು ಹೊಣೆಗಾರರಾಗಬೇಕು –(ತ್ಯಾಗಿ,2011)

ಅಂತರ್–ಕ್ರಿಯಾತ್ಮಕ ಶಿಕ್ಷಕರು ಹಾಗೂ ಕ್ರಿಯಾಶೀಲರಾಗಿರುವ ವಿದ್ಯಾರ್ಥಿಗಳಿಂದ ಕೂಡಿ ಚೇತನಯುಕ್ತ ಕಲಿಕಾ ವಾತಾವರಣ ಇರುವ ಶಾಲೆಗಳನ್ನು ಬಯಸುವ ಶಾಲಾ ನಾಯಕರಿಗೆ ನೆರವಾಗುವ ಸೂಕ್ತ ಮುಕ್ತ ಶಿಕ್ಷಣ ಸಂಪನ್ಮೂಲ(OER)ಗಳನ್ನು ಒದಗಿಸುವುದು TESS-Indiaದ ಗುರಿಯಾಗಿದೆ. ಎಲ್ಲಿ ಇಂತಹ ವಾತಾವರಣ ಇಲ್ಲವೋ, ಅಂತಹ ಶಾಲೆಗಳಲ್ಲಿ ಇಂತಹ ಬದಲಾವಣೆ ತರುವುದು ಒಂದು ಸವಾಲಿನ ಕಾರ್ಯವೇ ಆಗಿರುತ್ತದೆ. ಈ ಘಟಕವು ಶಾಲಾ ನಾಯಕರನ್ನು ಒಬ್ಬ ಸಾಧಕರನ್ನಾಗಿ ನೋಡುತ್ತದೆ. ಅಂದರೆ ಯಾರು ತಮ್ಮ ಪತ್ರವನ್ನು ತಮ್ಮ ಶಾಲೆಯಲ್ಲಿ ಇಂತಹ ಬದಲಾವಣೆಯನ್ನು ತರಲು ಕ್ರಿಯಾಶೀಲರಾಗುತ್ತಾರೋ ಅಂತವರನ್ನು ತಯಾರು ಮಾಡಲು ಈ ಸಂಪನ್ಮೂಲವು ನೆರವಾಗುತ್ತದೆ. TESS–ಇಂಡಿಯಾದ ಮು.ಶಿ ಸಂ.ಗಳು ನಿಮಗೆ ಪಾತ್ರ ವಹಿಸಲು ಅಗತ್ಯ ಸಲಕರಣೆಗಳನ್ನು ನೀಡುತ್ತದೆ. (ಹೆಚ್ಚಿನ ವಿವರಗಳಿಗೆ ಸಂಪನ್ಮೂಲ –1ನ್ನು ನೋಡಿರಿ)

ಈ ಮೊದಲು ಪರಿಚಾಯತ್ಮಕ ಘಟಕವು ನಿಮಗೆ TESS– ಇಂಡಿಯಾದ ಅಭಿವೃದ್ಧಿ ಪಡಿಸಿದ ಶಾಲಾ ನಾಯಕತ್ವ ಮು.ಶಿ ಸಂಪನ್ಮೂಲಗಳನ್ನು ನಿಮ್ಮದೇ ಸ್ವಂತ ಅಭಿವೃದ್ಧಿಯನ್ನು ಹೇಗೆ ಬಳಸಬಹುದೆಂಬುದರ ಬಗ್ಗೆ ಪರಿಚಯಿಸುತ್ತದೆ. ಈ ಎಲ್ಲ ಸಂಪನ್ಮೂಲಗಳ ಹಿಂದಿರುವ ವಿಚಾರವೆಂದರೆ 'ಕಲಿಕೆಯು ಒಂದು ಜೀವನಾದ್ಯಂತ ನಿರಂತರವಾಗಿ ನಡೆಯುವ ಪ್ರಕ್ರಿಯೆ. ಶಿಕ್ಷಕರು ನಿರಂತರ ಕಲಿಕಾರ್ಥಿಗಳಾಗ ಬೇಕಾದರೆ, ಶಾಲಾ ನಾಯಕರು ಸಹ ನಿರಂತರ ಕಲಿಕಾರ್ಥಿಗಳಾಗುವುದು ಅವಶ್ಯಕ. '

**ಕಲಿಕಾ ದಿನಚರಿ :–**

ನೀವು ಈ ಘಟಕವನ್ನು ಅಭ್ಯಸಿಸುವಾಗ , ನಿಮ್ಮ ಕಲಿಕಾ ದಿನಚರಿಯಲ್ಲಿ ಟಿಪ್ಪಣಿ ಮಾಡಿ ಕೊಳ್ಳಲು ನಿಮ್ಮನ್ನು ಕೋರಲಾಗುತ್ತದೆ. ಕಲಿಕಾ ದಿನಚರಿಯೆಂದರೆ, ನೀವು ನಿಮ್ಮ ಆಲೋಚನೆಗಳನ್ನು, ಕಲಿಕೆಯನ್ನು, ಯೋಜನೆಗಳನ್ನು ನಿತ್ಯವೂ ಬರೆದಿಡಬಹುದಾದ ಒಂದು ಪುಸ್ತಕ. ಬಹುಶ: ನೀವು ಈಗಾಗಲೇ ಈ ತೆರೆನಾದ ದಿನಚರಿ ಬರೆಯುತ್ತಿರಬಹುದು,

ನೀವು ಈ ಘಟಕದ ಮೇಲೆ ಈಗಾಗಲೇ ಒಬ್ಬರೇ ಅಭ್ಯಾಸ ಮಾಡುತ್ತಿರಬಹುದು; ಆದರೆ ಇನ್ನೊಬ್ಬ ಶಾಲಾ ನಾಯಕರ ಜೊತೆ ನಿಮ್ಮ ಕಲಿಕೆಯನ್ನು ಚರ್ಚಿಸಿದಾಗ ನೀವು ಇನ್ನೂ ಚೆನ್ನಾಗಿ ಕಲಿಯಬಹುದು. ಅವರು ನೀವು ಆಗಲೇ ಹೊಂದಿರುವ ನಿಮ್ಮ ಸಹದ್ಯೋಗಿಯಾಗಿರಬಹುದು, ಅಥವಾ ನೀವು ಹೊಂದ ಬಹುದಾದ ಹೊಸ ಸಂಬಂಧದಲ್ಲಿ ಇರಬಹುದು. ಇದನ್ನು ಒಂದು ಸಂಘಟಿತ ರೀತಿಯಲ್ಲಿ ಮಾಡಬಹುದು, ಅಥವಾ ಒಂದು ಅನೌಪಚಾರಿಕ ಆಧಾರದಲ್ಲಿ ಮಾಡಬಹುದು. ನಿಮ್ಮ 'ಕಲಿಕಾ ದಿನಚರಿ'ಯಲ್ಲಿ ನೀವು ಮಾಡಿಕೊಳ್ಳುವ ಟಿಪ್ಪಣಿಗಳು ನಿಮ್ಮ ಇಂತಹ ಸಂದರ್ಭಗಳಲ್ಲಿ ಉಪಯೋಗವಾಗುತ್ತದೆ. ಅಲ್ಲದೆ ನಿಮ್ಮ ದೀರ್ಘಕಾಲಿನ ಕಲಿಕೆಗಳನ್ನು ನಕ್ಷೆ ತಯಾರಿಕೆಯಲ್ಲಿ ಅಭಿವೃದ್ಧಿ ಯಲ್ಲಿ ಸಹಾಯಕವಾಗುವುದು.

# ಈ ಘಟಕದಲ್ಲಿ ನೀವು ಏನನ್ನು ಕಲಿಯಬಹುದು

- ನಿಮ್ಮಲ್ಲಿ ಇರುವ ಶಾಲಾ ನಾಯಕತ್ವದ ಕೌಶಲಗಳು ಹಾಗೂ ಸುಧಾಯಣೆ ಯಾಗಬೇಕಿರುವ ಕ್ಷೇತ್ರಗಳನ್ನು ಗುರುತಿಸುವುದು.
- TESS- ಇಂಡಿಯಾದ ಅಭಿವೃದ್ಧಿ ಪಡಿಸಿದ ಶಾಲಾ ನಾಯಕತ್ವ ಮುಕ್ತ ಶೈಕ್ಷಣಿಕ ಸಂಪನ್ಮೂಲಗಳನ್ನು, ನಿಮ್ಮ ಕಲಿಕೆಯ ಮಾರ್ಗಗಳನ್ನು ವಿನ್ಯಾಸಗೊಳಿಸಲು, ಆ ಮೂಲಕ ನಿಮ್ಮ ಶಾಲಾ ನಾಯಕತ್ವ ಗುಣಗಳನ್ನು ಹೆಚ್ಚಿಸಿಕೊಳ್ಳುವುದು.
- ನಿಮ್ಮ ಶಾಲೆಯನ್ನು ಒಂದು ಸಮರ್ಥ ಕಲಿಕಾ ಕೇಂದ್ರವಾಗಿಸುವ ಸಾಧ್ಯಕರ್ತರಾಗುವುದರ ಸಾಧ್ಯತೆ ತೆರೆದಿಡುವುದು.

# 1 ಭಾರತದಲ್ಲಿ ಶಾಲಾ ನಾಯಕರಾಗಿರುವುದು

ಶೈಕ್ಷಣಿಕ ಹಕ್ಕುಗಳ ಕಾಯ್ದೆ 2009, ಭಾರತದಲ್ಲಿನ ಶಾಲೆಗಳಿಗೆ, ಈ ಹಿಂದೆ ಇದ್ದುದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಸ್ವಾಯುತ್ತತೆಯನ್ನು ನೀಡಿದೆ. ಬೇರೆ ದೇಶಗಳಲ್ಲಿ ಶಾಲಾನಾಯಕರು ಅವರ ಆಯವ್ಯಯ ಬಜೆಟ್ ವಿಷಯದಲ್ಲಿ, ತಮಗೆ ಬೇಕಾದ ಶಿಕ್ಷಕರನ್ನು ನೇಮಕದ ವಿಷಯದಲ್ಲಿ, ಹಾಗು ಪಠ್ಯಕ್ರಮ ರೂಪಿಸುವ ವಿಷಯಗಳಲ್ಲಿ ಹೆಚ್ಚು ಸ್ವಾಯತ್ತತೆ ಹೊಂದಿದ್ದಾರೆ. ಈ ಬದಲಾವಣೆಗಳು ಹೆಚ್ಚು ಸ್ವಾತಂತ್ರ್ಯದ ಜೊತೆಗೆ ಹೆಚ್ಚಿನ ಜವಾಬ್ದಾರಿಗಳನ್ನು ತಂದಿದೆ. ಅಲ್ಲದೆ ಶಾಲಾ ನಾಯಕರು ಜಿಲ್ಲಾ ಶೈಕ್ಷಣಿಕ ಆಡಳಿತ ದಿಂದ ಮತ್ತು ಇತ್ತರೇ ಶೈಕ್ಷಣಿಕ ಅಧಿಕಾರಿಗಳಿಂದ ಸೂಚನೆಗೆ ಕಾಯದೆ, ತಾವೇ ಸ್ವಂತ ಜವಾಬ್ದಾರಿಯಿಂದ ಕಾರ್ಯ ತತ್ಪರರಾಗುವ ನಿರೀಕ್ಷೆಗಳನ್ನು ಮೂಡಿಸಿದೆ. ಭಾರತದಲ್ಲಿ ರಾಷ್ಟ್ರೀಯ ಶಾಲಾ ನಾಯಕತ್ವ ಶಾಲೆ, ನ್ಯೂಪಾ ತಮ್ಮ ಕೆಲಸದ ಮೂಲಕ ಇಂತಹ ಬೆಳವಣಿಗೆಗೆ ನೆರವು ನೀಡುತ್ತಿವೆ.

ಟೆಸ್ –ಇಂಡಿಯ, ಇದಕ್ಕಾಗಿ ಮುಕ್ತ ಶೈಕ್ಷಣಿಕ ಸಂಪನ್ಮೂಲಗಳ ಒಂದು ಬ್ಯಾಂಕ್‌ನ್ನು ಒದಗಿಸಿದೆ. ಈ ವ್ಯವಸ್ಥೆಯಲ್ಲಿ ಶಾಲಾನಾಯಕತ್ವದ 20 ಅಭ್ಯಾಸದ ಘಟಕಗಳನ್ನು ಇವೆ. ಇವು ಶಾಲಾ ನಾಯಕತ್ವದ ವಿವಿಧ ಮುಖಗಳನ್ನು (ರೂಪಗಳನ್ನು) ಕಲಿಯುವ ಚಟುವಟಿಕೆಗಳನ್ನು ನೀಡುವಂತೆ ವಿನ್ಯಾಸಿಸಲಾಗಿದೆ. ಕೆಲವು ಕೇವಲ ತರಗತಿಯಲ್ಲಿ ಕಲಿಸುವ –ಕಲಿಯುವುದರ ಸುಧಾರಣೆ, ಹಾಗೂ ಶಿಕ್ಷಕರ ತರಗತಿಯ ಅಭ್ಯಾಸಗಳ ಬಗ್ಗೆಯೇ ಲಕ್ಷ್ಯ ಹಾಕಿದ್ದರೆ, ಇತರ ಘಟಕಗಳು, ಶಾಲಾ ವ್ಯವಸ್ಥೆ ಹಾಗೂ ಪ್ರಕ್ರಿಯೆಗಳ ಅಂದರೆ– ಶಾಲಾ ಕಾಣ್ಕೆ(ದರ್ಶನ), ಶಾಲಾ ಸುತ್ತಲಿನ ಸಮುದಾಯದೊಂದಿಗೆ ಕಾರ್ಯ ನಿರ್ವಹಣೆ – ಮುಂತಾದವುಗಳ ಬಗ್ಗೆ ಲಕ್ಷ ಕೊಟ್ಟಿವೆ. ನೀವು ನಿಮ್ಮ ವ್ಯಕ್ತಿಪರ ಏಳ್ಗೆಗೆ ಸಹಾಯ ಮಾಡುವ ಅವಶ್ಯವೆನಿಸುವ ಮು.ಶೈ.ಸಂಗಳನ್ನು ಆರಿಸಿಕೊಳ್ಳಬಹುದು. ಈ ಘಟಕಗಳನ್ನು NCSL ಗುರುತಿಸಿದ ಆದ್ಯತೆಯ ಮೇರೆಗೆ ವರ್ಗೀಕರಿಸಿದ್ದರೂ ಅದೇ ಮಾರ್ಗವೆಂದು ನಿಯಮಿಸಿಲ್ಲ. ನೀವು ನಿಮ್ಮದೇ ಕಲಿಕೆಯ ಮಾರ್ಗವನ್ನು ರೂಪಿಸಿಕೊಳ್ಳಲು, ಘಟಕಗಳನ್ನು ಉಪಯೋಗಿಸಿಕೊಳ್ಳುವ ಸ್ವಾತಂತ್ರ್ಯವಿದೆ. ಹಾಗೇ ಅಂತಹ ಕಡೆಗೆ ಪ್ರೋತ್ಸಾಹ ನೀಡಲಾಗುತ್ತದೆ.

ಪ್ರತಿ ಘಟಕದಲ್ಲೂ ಚಟುವಟಿಕೆಗಳೂ ಮತ್ತು ವ್ಯಕ್ತಿಗಳ–ಅಧ್ಯಯನಗಳೂ ಇವೆ. ಚಟುವಟಿಕೆಗಳನ್ನು ನೀವು ನಿಮ್ಮ ಶಾಲೆಯಲ್ಲಿ ನಡೆಸಬೇಕು. ಕೆಲವೊಂದು ನಿಮ್ಮ ಸಹದ್ಯೋಗಿಗಳೊಂದಿಗೆ, ಮತ್ತೆ ಕೆಲವು ನೀವೇ ವೈಯಕ್ತಿಕವಾಗಿ ಮಾಡಬೇಕಾಗುತ್ತವೆ. ಇವು ನಿಮಗೆ ದೈನಂದಿನ ಚಟುವಟಿಕೆಗಳಿಗೆ ಹೊರತಾಗಿರುವಂತೆ ವಿನ್ಯಾಸಗೊಳಿಸಿಲ್ಲ. ನೀವು ದಿನನಿತ್ಯದ ಚಟುವಟಿಕೆಗೆ ಮಿಸಲಾಗಿಟ್ಟಿರುವ ಅವಧಿಯೊಳಗೆ ಅಂತರ್ಗತವಾಗುವಂತೆ, ಅವುಗಳ ಬಗ್ಗೆ ಚಿಂತನೆ ಮಾಡುವ ಮೂಲಕ ನೀವು ನಿರ್ವಹಿಸುತ್ತಿರುವ ಕಾರ್ಯ ಚಟುವಟಿಕೆಗಳಲ್ಲಿ ಹೊಸ ಹೊಳಹುಗಳನ್ನು ನಾವಿನ್ಯತೆಯನ್ನು ಕಂಡುಕೊಳ್ಳುವುದಕ್ಕೆ ನೆರವಾಗಲೆಂದು ವಿನ್ಯಾಸಗೊಳಿಸಲಾಗಿದೆ. ಪ್ರತೀ ಘಟಕವೂ ಸಂಬಧ್ಧವಾಗಿರುವಂತೆ ರಚಿಸಲಾಗಿದೆ; ಆದರೂ ಎಲ್ಲ ಚಟುವಟಿಕೆಗಳನ್ನು ಮಾಡದೇ, ನೀವು ಕೆಲವು ಚಟುವಟಿಕೆಗಳನ್ನು ಮಾತ್ರ ಆರಿಸಿಕೊಳ್ಳಬಹುದಾಗಿದೆ. ಈ ಮು.ಶೈ ಸಂಪನ್ಮೂಲಗಳು ನಿಮ್ಮ ಕಾರ್ಯ ಜ್ಞಾನ ಮತ್ತು ಅನುಭವವನ್ನು ಗೌರವಿಸುತ್ತದೆ. ಹಾಗೂ ನೀವು ಜೊತೆ ಜೊತೆಯಾಗಿ ಕೆಲಸ ಮಾಡಲು ಪ್ರೋತ್ಸಾಹಿಸುತ್ತವೆ.

ಈ ಪರಿಚಾಯಾತ್ಮಕ ಘಟಕದಲ್ಲಿ ನೀವು ನಿಮ್ಮ ವೃತ್ತಿಪರ ಅಭಿವೃದ್ಧಿಯತ್ತ ಯೋಚಿಸಲು ಆರಂಭಿಸುತ್ತೀರಿ. ನೀವು ಈಗಾಗಲೇ ಹೊಂದಿರುವ ಜ್ಞಾನ ಮತ್ತು ಕೌಶಲಗಳನ್ನು ನೀವು ಗಮನಿಸುತ್ತೀರಿ. ಹಾಗೂ ಹೇಗೆ ಒಬ್ಬ ಶಾಲಾನಾಯಕರಾಗಿ ನಿಮ್ಮ ನಡವಳಿಕೆಗಳನ್ನು ಅಭಿವೃದ್ಧಿ ಪಡಿಸಿಕೊಳ್ಳಬಹ್ಮದೆಂದು ಯೋಚಿಸುತ್ತೀರಿ.

ಟೆಸ್–ಇಂಡಿಯಾ, ಶಿಕ್ಷಕರಿಗಾಗಿ ಸಹ .ಮು.ಶೈ.ಸಂ.ಗಳನ್ನು ನೀಡಿದೆ. ಈ ಎಲ್ಲ ಸಂಪನ್ಮೂಲಗಳು ಕಲಿಕೆಯ ಸಾಮಾಜಿಕ ದೃಷ್ಠಿಕೋನವನ್ನು ತೆಗೆದುಕೊಂಡು ರಚಿಸಲ್ಪಟ್ಟಿವೆ. ಇದರಲ್ಲಿ ಯಾವತ್ತೂ ಕಲಿಕೆಯೂ ಸಹಭಾಗಿತ್ವದ ತತ್ವದ ಮೇರೆಗೆ ನಿಮ್ಮ ಶಾಲೆಯ ಇತರ ಸಹದೋಗ್ಯಿಗಳೊಂದಿಗೆ ಅಭ್ಯಾಸ ಮಾಡುವಂತೆ ನೆರವು ನೀಡುತ್ತಿವೆ. ಇವಾವುವೂ, ಉತ್ತಮ ಅಭ್ಯಾಸಗಳ ಸಿದ್ಧಪಡಿಸಿದ ಆಹಾರವಾಗಲಿ, ಅಥವಾ ಭೋದನಾ ಸಾಮಗ್ರಿಗಳಾಗಲಿ, ಅಲ್ಲ. ಪರ್ಯಾಯವಾಗಿ ಅವು, ನೀವು ಮತ್ತು ನಿಮ್ಮ ಶಿಕ್ಷಕರನ್ನು ಚಿಂತನಾಶೀಲರನ್ನಾಗಲು, ಸಂವಾಧಾರಿತ ಏಕತೆಯನ್ನು ಹಾಗೂ ಪಾತ್ರಗಳನ್ನು ಹೊಂದಲು ಪ್ರೇರೇಪಿಸುತ್ತದೆ. ಇವುಗಳ ಗುರಿ ನಿಮ್ಮನ್ನು ಕಲಿಕೆ ಮತ್ತು ವೈಚಾರಿಕತೆಗೆ ತೆರೆದುಕೊಳ್ಳುವಂತೆ ಮಾಡಿ ತಮ್ಮ ಸಮಸ್ಯೆಗಳನ್ನು ತಮ್ಮ ತರಗತಿ ಹಾಗೂ ಶಾಲೆಯ ಕೆಲಸದ ವಾತಾವರಣದಲ್ಲಿಯೇ ಪರಿಹಾರ ಕಂಡುಕೊಳ್ಳುವಂತೆ ಮಾಡುವುದು. ಅದು ನಿಮ್ಮ ಶಾಲೆ ಅಥವಾ ನಿಮ್ಮ ತರಗತಿಯೇ ಆಗಿರಬಹುದು (ಲೇವ್ ಮತ್ತು ವೆಂಗರ್, 1991, ವೆಂಗರ್,1998))

**ಚಿಂತನೆಗೆ ವಿರಾಮ**

ಒಬ್ಬ ಹಿರಿಯ ಶಿಕ್ಷಕರಾಗಿ ಅಥವಾ ಶಾಲಾ ನಾಯಕರಾಗಿ ನಿಮ್ಮ ಆರಂಬಿಕ ಕಾಲಕ್ಕೆ ಹೋಗಿ:

- ಶಾಲಾ ನಾಯಕರಾದಾಗಿನಿಂದ ನೀವು ಏನು ಕಲಿತಿದ್ದೀರಿ?
- ನೀವು ಹೇಗೆ ಕಲಿಯುತ್ತೀರಿ?
- ವೃತ್ತಿಪರ ಕಲಿಕೆಗೆ ನಿಮಗಿರುವ ಅವಕಾಶಗಳೇನು?

## 2 ಶಾಲಾ ನಾಯಕರಾಗಿ ನಿಮ್ಮ ಸ್ವಂತ ಕಲಿಕೆಯ ಬಗ್ಗೆ ಚಿಂತನೆ

ಹೊಸದಾಗಿ ಬರುವ ಅವಕಾಶಗಳನ್ನು ಬಳಸಿಕೊಳ್ಳಲು ಶಾಲಾ ನಾಯಕರಿಗೆ ಉನ್ನತಮಟ್ಟದ ಕೌಶಲಗಳು ಬೆಳೆಸಿಕೊಳ್ಳ ಬೇಕಾಗುತ್ತದೆ. ನೀವು ಒಬ್ಬ ಶಾಲಾ ನಾಯಕರಾಗಿರಲು, ಪ್ರಾಯಶ: ನೀವೊಬ್ಬ ಉತ್ತಮ ಶಿಕ್ಷಕರಾಗಿರುವುದು, ಮತ್ತು ಉನ್ನತ ಶಿಕ್ಷಣ ಹೊಂದಿರುವುದು ಕಾರಣವಾಗಿರಬಹುದು. ನಿಮ್ಮ ಪಾತ್ರ ಶಾಲೆಯ ದೈನಂದಿನ ಕಾರ್ಯಗಳ ನಿರ್ವಹಣೆ ಮಾಡುತ್ತ ದಿನಗಳೆದಂತೆ, ಶಾಲೆಯು ವಿದ್ಯಾರ್ಥಿಗಳಿಗೆ ಅತ್ಯುತ್ತಮ ಶಿಕ್ಷಣವನ್ನು ನೀಡುವ ಕೆಲಸ ಮಾಡಲು ನೀವು ಹೆಚ್ಚು ಪರಿಣಾಮಕಾರಿಯಾಗಿ ಶಾಲಾ ನಾಯಕತ್ವ ನಿರ್ವಹಿಸಲು ಬೇಕಾದ ಕೌಶಲಗಳನ್ನು ಬೆಳಸಿಕೊಳ್ಳನ್ನು ಬೆಳಸಿಕೊಳ್ಳಲು ತಿಳಿಸಲಾಗುತ್ತದೆ.

**ಚಿಂತನೆಗೆ ವಿರಾಮ**

ನಿಮ್ಮ ಶಿಕ್ಷಕ ವೃತ್ತಿಯ ಆರಂಭಿಕ ದಿನಗಳನ್ನು ನೆನಪಿಸಿಕೊಳ್ಳಿ, ಈಗ ಇನ್ನೂ ಮುಂದಿನ 10ವರ್ಷಗಳ ಬಗ್ಗೆ ಯೋಚಿಸಿರಿ. ಎರಡೂ ಕಾಲಘಟ್ಟಗಳ ನಡುವೆ ಅಂದರೆ ನೀವು ವೃತ್ತಿ ಆರಂಭಿಸಿದ ಕಾಲದ ಶಾಲೆ ಹಾಗೂ ಇನ್ನೂ 10 ವರ್ಷಗಳ ನಂತರ ಇರಬಹುದಾದ ಶಾಲೆಗಳ ನಡುವೆ ಇರಬಹುದಾದ ಅತ್ಯಂತ ಪ್ರಮುಖ ವ್ಯತ್ಯಾಸವೇನು?

### ಚಟುವಟಿಕೆ –1 ಒಬ್ಬ ನಾಯಕರಾಗಿ ನಿಮ್ಮ ವೃತ್ತಪರ ಬೆಳವಣಿಗೆ



**ಚಿತ್ರ–1 ಒಬ್ಬ ಆಲೋಚನಾಶೀಲ ನಾಯಕನ ಚಿತ್ರ**

1. ನಿಮ್ಮ ಕಲಿಕಾ ದಿನಚರಿಯನ್ನು ನೀವು ನಿಮ್ಮಲ್ಲಿ ನಾಯಕನಾಗಿ ಗುರ್ತಿಸಿಕೊಳ್ಳಬಹುದಾದ ಐದು ಗುಣಗಳ ಬಗ್ಗೆ ಒಂದೊಂದು ಪದವನ್ನು ಬರೆದುಕೊಳ್ಳಿ.
2. ನಿಮ್ಮ ಶಿಕ್ಷಕ ವೃಂದವು ನಿಮ್ಮನ್ನು ನಾಯಕರೆಂದು ಹೇಗೆ ಗುರುತಿಸುತ್ತಾರೆ? ನಿಮ್ಮನ್ನು ಯಾಕೆ ಇಷ್ಟಪಡುತ್ತಾರೆ? ನಿಮ್ಮ ಜ್ಞಾನ ಮತ್ತು ವೃತ್ತಿ ಕೌಶಲಗಳನ್ನು ಗೌರವಿಸುತ್ತಾರೆಯೆ? ನೀವು ನಿಮ್ಮ ವೃತ್ತಿಪರ ಅಭಿವೃದ್ಧಿಯನ್ನು ಮಾಡಿಕೊಳ್ಳುತ್ತಿದ್ದಿರೆಂದು ನಿಮ್ಮ ಶಿಕ್ಷಕರಿಗೆ ಹೇಗೆ ಪ್ರದರ್ಶಿಸುತ್ತೀರಿ?

ಉದಾರಣೆಗಾಗಿ, ಅವರು ನಿಮ್ಮನ್ನು, 'ಹೊಸ ವಿಚಾರಗಳನ್ನು ಆಚರಣೆ ತಂದು , ಅದರ ಪರಿಣಾಮದ ಬಗ್ಗೆ ಚಿಂತನೆ ನಡೆಸುವ ವ್ಯಕ್ತಿ' ಎಂದು ಗುರುತಿಸುವರು!!

3. ಮೊದಲನೆಯ ಮತ್ತು ಎರಡನೇ ಪ್ರಶ್ನೆಗಳಿಗೆ ನಿಮ್ಮ ಉತ್ತರದ ಆಧಾರದ ಮೇಲೆ ನೀವು ಶಾಲಾ ನಾಯಕರಾಗಿ ವೃತ್ತಿಪರ ಬೆಳವಣಿಗೆ ಹೊಂದಲು ಇರುವ ಅಡೆ–ತಡೆಗಳನ್ನು ಗುರುತಿಸಿರಿ.

**ಸಂವಾದ**

ನಿಮ್ಮ ಉತ್ತರಗಳು ನಿಮ್ಮ ಸಂದರ್ಭಕ್ಕೆ ಹಾಗೂ ನಿಮಗೆ ವೈಯುಕ್ತಿವಾದವುಗಳು. ಆದರೂ,ಕೆಳಗೆ ನೀಡಿರುವ 3 ಮಾದರಿ ವಿಭಿನ್ನ ರೀತಿಯ ನಾಯಕತ್ವಗಳ ಬಗ್ಗೆ ಗಮನಿಸಿದರೆ, ನೀವು ನಿಮ್ಮ ಉತ್ತರಗಳ ಬಗ್ಗೆ ಇನ್ನೂ ಗಂಭೀರವಾಗಿ ಚಿಂತಿಸುವುದು ಸಾಧ್ಯವಾಗಬಹುದು.

- **ಮೊದಲನೇ ತರಹದ ವ್ಯಕ್ತಿ:** ಶಾಲಾ ನಾಯಕರಾಗಿ ತುಂಬ ವರ್ಷಗಳಿಂದ ಶಾಲೆಯನ್ನು ನಡೆಸಿದ ಅನುಭವಿರುವ ಓರ್ವ ವ್ಯಕ್ತಿಯಾಗಿರಬಹುದು. ಅವರು ತಮ್ಮ ಸಾಮರ್ಥ್ಯದ ಬಗ್ಗೆ ತುಂಬ ನಂಬಿಕೆ ಉಳ್ಳವರಾಗಿಬಹುದು. ಆದರೆ ಅವರಿಗೆ ತಮ್ಮ ಇತರೇ ಸಹೋದ್ಯೋಗಿಗಳಿಗೆ ನಾವಿನ್ನೂ ಕಲಿಯುತ್ತಿದ್ದೇವೆಂಬುದನ್ನು ಹಾಗು ತಮ್ಮ ಅಭ್ಯಾಸಗಳನ್ನು ಬದಲಾಯಿಸಿ ಕೊಳ್ಳುತ್ತಿರುವುದನ್ನು ತೋರಿಸಲು ಕಷ್ಟವಾಗುತ್ತಿರಬಹುದು. ಏಕೆಂದರೆ ಅವರು ತಾವು ತಮ್ಮ ವೃತ್ತಿಯಲ್ಲಿ ಸರಿಯಾಗಿದ್ದಾರೆಂದು ತೋರಿಸುವರಾಗಿದ್ದು, ಯಾವಾಗಲೂ ನಿಯಂತ್ರಣ ಹೊಂದಿರುವರೆಂದು ಬಿಂಭಿಸುವರಾಗಿರಬಹುದು. ಆದ್ದರಿಂದ ತಮ್ಮ ವೃತ್ತಿಪರ ಬೆಳಬಣಿಗೆಯನ್ನು ಯಾವಾಗಲೂ ಖಾಸಗಿ ವಿಷಯ ಮುಚ್ಚಿಡಬೇಕಾದ ವಿಷಯವೆಂದು ಭಾವಿಸಬಹದು.
- **ಎರಡನೇ ತರಹದ ವ್ಯಕ್ತಿಗಳು:** ಇನ್ನೂ ಚಿಕ್ಕ ವಯಸ್ಸಿನವರಾಗಿದ್ದು, ತಾವು ಇನ್ನೂ ವೃತ್ತಿಯಲ್ಲಿ ಬೆಳವಣಿಗೆ ಹೊಂದುತ್ತಿದೇವೆಂದು ತೋರಿಸಿಕೊಂಡರೆ, ತಮ್ಮ ಅಧಿಕಾರದ ಮೇಲೆ ಹಿಡಿತ ಕಳೆದು ಕೊಳ್ಳಬಹುದೆಂಬ ಕಳಕಳಿ ಇರುವವರಾಗಿರಬಹುದು. ಅವರು ತರಗತಿ ಭೋದನೆ ವಿಷಯದಲ್ಲಿ ಇತರ ಕೆಲವು ಶಿಕ್ಷಕರಿಗಿಂತ ಕಡಿಮೆ ಅನುಭವ/ಪರಿಣಿತ ಹೊಂದಿದವರೆಂದು ತಿಳಿದಿರಬಹುದು. ಆದರೆ ಮಾದರಿ ನಾಯಕತ್ವ ನೀಡುವ ಬಗ್ಗೆ ಅವರಿಗೆ ತುಂಬಾ ಉತ್ಸಾಹ, ಕಾಣ್ಕೆ ಮತ್ತು ನಾಯಕತ್ವ ನೀಡುವ ಬಗ್ಗೆ ಹೊಸ ವಿಚಾರಗಳನ್ನು ತಿಳಿದು ಕೊಂಡಿರಬಹುದು. ಹಾಗೂ ಈ ವಿಷಯದಲ್ಲಿ ಸಹೋದ್ಯೋಗಿಗಳಿಂದ ಆದರ, ಮನ್ನಣೆ ಗಳಿಸಿರಬಹದು.
- ಅಂತಿಮವಾಗಿ ಶಾಲಾ ನಾಯಕರ ಇನ್ನೊಂದು ಗುಂಪೂ ಹೀಗೂ ಇರಬಹುದು. ಅವರಿಗೆ ಅತ್ಯುತ್ತಮ ಅಭ್ಯಾಸಗಳನ್ನು ಬೆಳಸಿಕೊಳ್ಳಲು ಮತ್ತು ಅದನ್ನು ಪಾರದರ್ಶಕ ರೀತಿಯಲ್ಲಿ ಮಾಡಲು ಆಸಕ್ತಿ ಇದ್ದರೂ, ಅವರಿಗೆ ಅದಕ್ಕಾಗಿ ಸಮಯ ವಿನಿಯೋಗಿಸಲು ಅಸಾಧ್ಯವಾಗುತ್ತಿರಬಹುದು. ಇಂತಹ ನಾಯಕರು ಸುಷುಪ್ತಸ್ಥಿತಿಯಲ್ಲಿ, ಒಂದು ಮನೋಧೋರಣೆಯನ್ನು, ವೃತ್ತಿಪರ ಬೆಳವಣಿಗೆ ಬಗ್ಗೆ ಬೆಳಸಿಕೊಳ್ಳುತ್ತಾ, ಶಾಲೆಗಳಲ್ಲಿ ಯಾವುದೇ ರೀತಿಯ ಬದಲಾವಣೆಯನ್ನು ಗುಪ್ತವಾಗಿ ಶಿಥಿಲಗೊಳಿಸುತ್ತಿರಬಹುದು.
- ಒಬ್ಬ ಉತ್ತಮ ನಾಯಕನಿರಬೇಕಾದ ಗುಣಗಳ ಬಗ್ಗೆ ಉತ್ತಮ ದಾಖಲಾತಿಗಳು ಇವೆ. ತಖ್ತೆ 1ರಲ್ಲಿ ಇವು ಭಾರತದ ಸಂದರ್ಭದಲ್ಲಿ ಹೇಗೆ ಅಳವಡಿಸಕೊಳ್ಳಬಹುದೆಂದು ಸಲಹೆಗಳನ್ನು ನೀಡಿದೆ. ನೀವು ಇದರ ವಿಶ್ಲೇಷಣೆಗೆ **ಚಟುವಟಿಕೆ –3ರ** ನಂತರ ಹಿಂತಿರುಗಿ ಬರುವಿರಿ.

ಒಬ್ಬ ಉತ್ತಮ ನಾಯಕನ ಗುಣಗಳು ಚೆನ್ನಾಗಿ ದಾಖಲಿಸಲ್ಪಟ್ಟಿವೆ. ತಖ್ತೆ 1 ರಲ್ಲಿ ಭಾರತದ ಸನ್ನಿವೇಶದಲ್ಲಿ ಹೇಗೆ ಈ ಗುಣಗಳು ಅನ್ವಯವಾಗುತ್ತವೆ ಎಂಬುದಕ್ಕೆ ಕೆಲವು ಸಲಹೆಗಳನ್ನು ನೀಡಲಾಗಿದೆ. ಇದರ ವಿಶ್ಲೇಷಣೆಗೆ, ನೀವು ಚಟುವಟಿಕೆ–3 ರ ನಂತರ ಹಿಂದಿರುಗುವಿರಿ.

***ತಖ್ತೆ– 1*** *ಉತ್ತಮ ನಾಯಕರ ಗುಣಗಳು (ಗಾರ್ಡನರ್, 1997 ರಿಂದ ಸೇರ್ಪಡಿಸಲಾಗಿದೆ)*

| **ಉತ್ತಮ ನಾಯಕನ ಗುಣಗಳು** | **ನಿಮ್ಮ ಸಂದರ್ಭದಲ್ಲಿ ಇವುಗಳ ಅರ್ಥೈಸುವಿಕೆ** |
|---|---|
| 1) ಅಧಿಕಾರವನ್ನು ಎದುರಿಸುವುದು | ನೀವು ಜಿಲ್ಲಾ ಶೈಕ್ಷಣಿಕ ಅಧಿಕಾರಗಳೊಂದಿಗೆ, ಹಾಗೂ ಬ್ಲಾಕ್ ಮಟ್ಟದ, ಕ್ಲಸ್ಟರ್ ಮಟ್ಟದ ಅಧಿಕಾರಿಗಳೊಂದಿಗೆ, ಪಂಚಾಯತ ರಾಜ್ಯ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಹಾಗೂ ತಮ್ಮದೇ ಶಾಲೆಯ ನಿರ್ವಾಹಕ ಸಮಿತಿಯೊಂದಿಗೆ |

| | |
|---|---|
| | ನಿರಂತರ ಕೆಲಸ ಮಾಡಬೇಕಾಗಿರುತ್ತದೆ. ಹಾಗೂ ಇವೆಲ್ಲವೂ ಶಾಲೆಯ ಒಳತಿಗೆ ಮೂಲವಾದ ಸಂಪನ್ಮೂಲಗಳ ಕೊಡವಿಕೆಯ ಮೇಲೆ ನಿಯಂತ್ರಣ ಹೊಂದಿವೆ. ಶಾಲೆಗೆ ಶಿಕ್ಷಕರ ನೇಮಕಾತಿಯೂ ಇವುಗಳ ಕೈಯಲ್ಲಿದೆ. ಆದ್ದರಿಂದ ಇವುಗಳೊಂದಿಗೆ ಸೌಹಾರ್ದಯುತ ಸಂಬಂಧ ಹೊಂದಿರುವುದು ಮುಖ್ಯವಾಗುತ್ತದೆ. ಇವುಗಳ ಸಿಬ್ಬಂದಿಗಳೊಂದಿಗೆ ತುಂಬ ಎಚ್ಚರದಿಂದ ಹಾಗು ಸೂಕ್ಷ್ಮಸಂವೇದಿತನದಿಂದ ನಡೆದುಕೊಳ್ಳ ಬೇಕಾಗಿರುತ್ತದೆ. ಇವರನ್ನು ಎದರು ಹಾಕಿಕೊಳ್ಳುವುದು ಉತ್ತಮ ಅಭ್ಯಾಸವಲ್ಲ ಆದರೆ ನಿಮ್ಮ ಶಾಲೆಯ ಅಭಿವೃದ್ಧಿಗೆ ಪೂರಕವೆಂದಾದಲ್ಲಿ,ವಿಭಿನ್ನವಾಗಿ, ಸಾಮಾನ್ಯವಾಗಿ ಅವರ ವಿರೋಧಿಸಿಯಾದರೂ, ಕಾರ್ಯ ನಿರ್ವಹಿಸಲು ಹೆದರಬಾರದು. |
| 2) ಅಪಾಯಗಳಿಗೆ ಸಿದ್ಧರಾಗಿರಬೇಕು | ಸಾಂಸ್ಕೃತಿಕವಾಗಿ ಇದು ಕಷ್ಟಸಾಧ್ಯ. ಏಕೆಂದರೆ ಭಾರತ ಹಲವಾರು ರೀತಿಯ ಶ್ರೇಣಿಕರಣದಿಂದ ಕೂಡಿದ ಸಮಾಜ. ಇಲ್ಲಿಯ ಜನ/ ಸಮುದಾಯ ಯಾವುದೇ ರೀತಿಯ ತೀರ್ಮಾನಕ್ಕೂ ಮೇಲಿನ ಮಟ್ಟದಿಂದ ಅಂಗೀಕಾರಕ್ಕಾಗಿ ಕಾಯುವುದು ಸಾಮಾನ್ಯ. ಆದರೆ ನಿಮಗೆ ಜಿಲ್ಲಾ ಮಟ್ಟದ ಆಧ್ಯತೆಗಳ ಬಗ್ಗೆ ಸ್ಪಷ್ಟ ಅರಿವಿದ್ದು, ಶಾಲಾ ಅಭಿವೃದ್ಧಿ ಯೋಜನೆಯ ಬಗ್ಗೆ ಸ್ಪಷ್ಟತೆ ಇದ್ದು, ಬದಲಾವಣೆಗೆ ಸರಿಯಾಗಿ ಯೋಚಿಸಿ ಪಾರದರ್ಶಿತ ತೀರ್ಮಾನ ತೆಗೆದುಕೊಂಡಿದ್ದೇ ಆದಲ್ಲಿ, ನೀವು ಹಾನಿಯ ಅಪಾಯವನ್ನು ತೆಗೆದುಕೊಳ್ಳಲು ಅಡ್ಡಿಯಿಲ್ಲ. ಏಕೆಂದರೆ ದೀರ್ಘಕಾಲದಲ್ಲಿ ಅದು ಶಾಲೆಯ ಒಳತಿಗಾಗಿ ಮಾಡಿರುತ್ತೀರಿ. |
| 3) ಸೋಲಿನ ಮುಖಾಮುಖಿಯಲ್ಲಿ ಪುಟಿದು ಬರುವುದು | ಬಹುತೇಕ ಸಂಸ್ಕೃತಿಗಳಲ್ಲಿ 'ಕೆಲಸವನ್ನು ಸರಿಯಾಗಿ ಮಾಡಲಿಲ್ಲ, ನನ್ನಿಂದ ತಪ್ಪು ಸಂಭವಿಸಿದೆ' ಎಂದು ಒಪ್ಪಿಕೊಳ್ಳುವುದು ಬಹಳ ಕಷ್ಟಕರ ವಿಷಯ. ಬದಲಾವಣೆಯ ನಿರ್ವಹಣೆ ಬಹಳ ಶ್ರಮದ ಕೆಲಸ ಮತ್ತು ಯಾವಾಗಲು ಸುಸೂತ್ರವಾಗಿ ನಡೆಯುವುದಿಲ್ಲ. ಯಾವಾತ್ತೂ ನಾವು ಯೋಚಿಸಿದಂತೆ ಕೆಲಸ ನಡೆಯುವುದಿಲ್ಲ. ಆ ಸಂದರ್ಭವನ್ನು ನಾವು ಕಲಿಕೆಯ ಅವಕಾಶವೆಂದು ಭಾವಿಸಬೇಕು. ನಮ್ಮ ಯೋಜನೆಯಂತೆ ಕೆಲಸ ಸಾಧ್ಯವಾಗದ ಬಗ್ಗೆ ಚಿಂತನೆ ಮಾಡಿ, ಕಾರಣಗಳನ್ನು ಕಂಡು ಹಿಡಿದು, ಮತ್ತೆ ಕಾರ್ಯಪ್ರವರ್ತಕರಾಗಬೇಕು. ಯಾವತ್ತೂ ನಾವು ಬೇರೆ ರೀತಿಯಲ್ಲಿ ಕೆಲಸ ಮಾಡಬೇಕಿತ್ತು ಎಂಬ ಹಿಮ್ಮಾಹಿತಿ ಒಪ್ಪಿಕೊಳ್ಳುವುದಕ್ಕೆ ಹಿಂಜರಿಯ ಬಾರದು. |
| 4) ಅಂತ: ಪ್ರೇರಣ ಮತ್ತು ಮೂಲ ಪ್ರವೃತ್ತಿಗಳಲ್ಲಿ ನಂಬಿಕೆ | ನಿಮಗೆ ಪ್ರಾಯಶ: ಬೇರೆ ಬೇರೆ ಶಾಲೆಗಳಲ್ಲಿ ಶಿಕ್ಷಕರಾಗಿ ಕೆಲಸ ಮಾಡಿದ ಅನುಭವ ಇರಬಹುದು. ಈ ವಿಭಿನ್ನ ಅನುಭವಗಳ ಹಿನ್ನಲೆಯನ್ನು, ನಿಮ್ಮ ನಾಯಕತ್ವವನ್ನು ಕಟ್ಟುವುದಕ್ಕೆ ಬಳಸಿಕೊಳ್ಳಲು ಸಾಧ್ಯವಾಗಬೇಕು. ಸ್ವಾಯುತ್ತ ಶಾಲೆಗಳ ಬಗೆಗಿನ ಈಗಿನ ಹೆಗ್ಗುರಿ, ನಿಮಗೆ ಹೆಚ್ಚು ಕ್ರಿಯಾಶೀಲರಾಗಲು ಹಾಗೂ ಹೆಚ್ಚಿನ ಸ್ವಾತಂತ್ರವಾಗಿ ಕಾರ್ಯ ನಿರ್ವಹಿಸುವ ಅವಕಾಶ ನೀಡುತ್ತದೆ. |
| 5) ದೊಡ್ಡ ಚಿತ್ರಣವನ್ನು ಸದಾ ನೆನಪಿನಲ್ಲಿಡುವ ಸಾಮರ್ಥ್ಯ | ಇದು ಎಲ್ಲ ನಾಯಕರಿಗೂ ಅನ್ವಯಿಸುತ್ತದೆ. ದೀರ್ಘ ಕಾಲೀನ ಕಾಣ್ಕೆಯನ್ನೂ ಸ್ಥಾಪಿಸುವುದು ಹಾಗೂ ಅದನ್ನು ಎಲ್ಲರಿಗೂ ಅರ್ಥೈಸುವಂತ ಸಂವಹನ ಮಾಡುವುದು ನಿಮ್ಮದೇ ಪಾತ್ರ. ನಿಮ್ಮ ಶಾಲೆಯ ಎಲ್ಲ ಕಾರ್ಯಗಳೂ, ಎಲ್ಲ |

| | |
|---|---|
| | ಪ್ರಾರಂಭಗಳೂ, ಈ ಕಾಣ್ಕೆಯೊಂದಿಗೆ ಹೊಂದಾಣಿಕೆ ಯಾಗಬೇಕು. ಅದಕ್ಕಾಗಿಯೇ ಒಂದು ಶಾಲಾನಾಯಕತ್ವ ಮುಕ್ತ ಶೈ.ಸಂ ಇದ್ದು ಅದು – ಎಲ್ಲರನೊಳಗೊಂಡು ಕಾರ್ಯ ನಿರ್ವಹಿಸುತ್ತಾ, ಹೇಗೆ ಕಾಣ್ಕೆಯನ್ನೂ ಕಟ್ಟುವುದು ಹಾಗು ಶಾಲಾ ನಿರ್ವಹಣಾ ಸಮಿತಿಯೊಡಗೂಡಿ ಶಾಲಾ ಅಭಿವೃದ್ಧಿ ಯೋಜನೆ ತಯಾರು ಮಾಡುವುದು–ಮುಂತಾದುವುಗಳ ಬಗ್ಗೆ ಕಾರ್ಯ ಸಾಧ್ಯವಾದ ಸಲಹೆಗಳನ್ನು ನೀಡುತ್ತದೆ. |
| 6) ನೈತಿಕ ಬದ್ಧತೆ | ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು –2005, ಶಿಕ್ಷಕರ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು – 2009, ಮತ್ತು ಶೈಕ್ಷಣಿಕ ಹಕ್ಕು ಕಾಯ್ದೆ–2009, ಇವುಗಳಲ್ಲಿ ಪ್ರತಿಪಾದಿತವಾಗಿರುವ ಮೌಲ್ಯಗಳು ಹಾಗು ನಂಬಿಕೆಗಳು ನಮ್ಮ ದೇಶದಲ್ಲಿ ರೂಡಿತವಾಗಿರುವ ಮೌಲ್ಯಗಳು ಹಾಗು ನಂಬಿಕೆಗೆ ಸವಾಲನ್ನೊಡ್ಡಿವೆ. ಸರಕಾರವೂ ಈ ಮೂಲಕ ವ್ಯಕ್ತ ಪಡಿಸಿದ ಹೆಬ್ಬಯಕೆಗಳನ್ನು ಪೂರೈಸಲು, ಈ ಹೆಬ್ಬಯಕೆಗಳ ಹಿಂದಿರುವ ಮೌಲ್ಯಗಳನ್ನು ಹಾಗು ನೀತಿಗಳನ್ನು ಅರ್ಥಮಾಡಿಕೊಳ್ಳುವುದು, ಹಾಗು ಇವುಗಳನ್ನು ನಿಮ್ಮ ಶಾಲೆ ಹಾಗು ಅದರ ಸುತ್ತಲಿನ ಸಮುದಾಯಕ್ಕೆ ಅರ್ಥೈಸುವುದು ನಿಮ್ಮ ನೈತಿಕ ಹೊಣೆ ಮತ್ತು ನಾಯಕತ್ವದ ಬದ್ದತೆಯಾಗಿರುತ್ತದೆ. |
| 7) ಸಮಯ ಪ್ರಜ್ಞೆ ಮತ್ತು ಅನುಬವಗಳ ಸಿಂಹಾವಲೋಕನ ಮತ್ತು ಕಲಿಯುವುದು | ನೀವು ನಿಮ್ಮ ಶಾಲೆಯನ್ನು ಮೌಲ್ಯಮಾಪನ ಮಾಡಲಾರಂಭಿಸಿದಾಗ, ನೀವು ಇನ್ನೂ ಮಾಡಬೇಕಿರುವ ಹಲವಾರು ಬದಲಾವಣೆಯನ್ನು ಗುರುತಿಸಲು ಆರಂಭಿಸುತ್ತೀರಿ. ಆದರೆ ಅತಿ ಕ್ಷಿಪ್ರಗತಿಯಲ್ಲಿ ತೀವ್ರವಾದ ಬದಲಾವಣೆಗಳನ್ನು ತರದಿರುವುದು ಬಹಳ ಮುಖ್ಯ. ನೀವು ಆದ್ಯತೆಗಳನ್ನು ಗುರುತಿಸುವುದು, ಹಾಗು ನಿಧಾನವಾಗಿ ಬದಲಾವಣೆಯತ್ತ ಮುನ್ನಡೆಯುವುದು, ಹಾಗೂ ಆ ಕ್ರಿಯೆಯಲ್ಲಿ ಎಲ್ಲ ಶಿಕ್ಷಕರನ್ನೂ ಕರೆದೊಯ್ಯುವುದು ಮುಖ್ಯ. |

## ವ್ಯಕ್ತಿಗತ – ಅಭ್ಯಾಸ –1 ಶ್ರೀಮತಿ ಅಪರಾಜಿತ ಕಲಿಕೆಯ ಬಗ್ಗೆ ವಿಚಾರಿಸುವುದು

*ಶ್ರೀಮತಿ ಅಪರಾಜಿತ ಒಂದು ಗ್ರಾಮೀಣ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯಿನಿ. ಅವರು ಆ ಶಾಲೆಗೆ ಹೋಗುವಾಗಲೇ, ಆ ಜಿಲ್ಲೆಯ ಶೈಕ್ಷಣಿಕ ಅಧಿಕಾರಿ ಆ ಶಾಲೆ ಮತ್ತು ಊರಿನ ಬಗ್ಗೆ ಹೆಚ್ಚು ಬಿರವಸೆಗಳನ್ನೇನು ಇಟ್ಟುಕೊಳ್ಳಬಾರದೆಂದೂ, ಹಳ್ಳಿಯ ಹುಡುಗರಿಗೆ ಕಲಿಕಯು ಕಷ್ಟವೆಂದು ಎಚ್ಚರಿಸಿ ಕಳಿಸಿದ್ದರು. ಅವರು ಆರಂಭಿಸಿದಾಗ ಶಾಲೆಯ ದಾಖಲಾತಿ 69 ಇತ್ತು.*

ಅವರ ಮಾತಿನಲ್ಲಿ ಅವರ ಅನುಭವ ಕೇಳೋಣ.

"ಮೊದಲ ದಿನದಂದು, ನಾನು ಬಹಳ ಉತ್ಸಾಹ ದಿಂದ ಆರಂಭಿಸಲು ಇಚ್ಚಿಸಿದೆ ಆದರೆ ಪ್ರಾರ್ಥನೆಗಾಗಿ ನಿಂತ ಮಕ್ಕಳು ಕೇವಲ 45 ಮಾತ್ರ ನನ್ನ ಸಹ ಶಿಕ್ಷಕರು ಹೇಳಿದ್ದು, ಆದಿನ ಹಾಜರಾತಿ ಅತ್ಯುತ್ತಮವಾಗಿದು ಸರಾಸರಿ 30ಕ್ಕಿಂತ ಹೆಚ್ಚು ಮಕ್ಕಳು ಬರುವುದದಿಲ್ಲವೆಂದು, ಆದಿನ ಹೊಸ ಗುರುಗಳನ್ನು ನೋಡುವ ಉತ್ಸುಕತೆಯಲ್ಲಿ ಹಾಜರಾತಿ ಹೆಚ್ಚಾಗಿರಬಹುದೆಂದು ತಿಳಿಸಿದರು. ಅವರು ಹೇಳಿದ್ದು ಸರಿ ಇತ್ತು ಮಾರನೇಯ ದಿನ ಕೇವಲ 32 ಮಕ್ಕಳು ಬಂದಿದ್ದರು. ಅದರಲ್ಲಿಯೂ ಕೆಲವು ಮಕ್ಕಳು ಮಧ್ಯಾಹ್ನದ ವೇಳೆಯಲ್ಲಿ ನಾಪತ್ತೆಯಾಗಿದ್ದರು!"

ಶಾಲೆಯ ಅವಧಿಯ ನಂತರ ಹಳ್ಳಿಯೊಳಗೆ ಸುತ್ತಲು ಹೋದರು. ಅಲ್ಲಿ ರಸ್ತೆಯಲ್ಲಿ ತುಂಬ ಜನ ಮಕ್ಕಳು ಆಡುತ್ತಿದ್ದುದನ್ನು ಕಂಡು ಆಶ್ಚರ್ಯವಾಯಿತು. ಅಲ್ಲದೆ ಸುಮಾರು ಸಂಖ್ಯೆಯಲ್ಲಿ ಮಕ್ಕಳು ಅಂಗಡಿಗಳಲ್ಲಿ ಮಾರುಕಟ್ಟೆಯಲ್ಲಿ ಹಾಗು ಹೊಲಗಳಲ್ಲಿ ಕೆಲಸ ಮಾಡುತ್ತಿರುವುದು ಕಂಡು ಬಂದಿತು. ನಾನು ಸೈಕಲ್ ರಿಪೇರಿ ಮಾಡುತ್ತಿದ್ದ ಒಬ್ಬ ಚಿಕ್ಕ ಹುಡಗನಿಗೆ "ಅವನು ಯಾಕೇ ಶಾಲೆಗೆ ಬರುತ್ತಿಲ್ಲ"ವೆಂದು ಕೇಳಿದೆ. ಆಗ ಆತ ಹೆಮ್ಮೆ ಇಂದ ಹೇಳಿದ " ಅಲ್ಲಿ

ನಾನು ದಿನಕ್ಕೆ ಒಂದುನೂರು ರೂಪಾಯಿ ದುಡಿಯುತ್ತಿದ್ದೇನೆ. ಶಾಲೆಗೆ ಬಂದರೆ ಏನು ಕಲಿಯಲು ಸಾಧ್ಯ" ಎಂದು ಕೇಳಿದ. ಹಲವಾರು ಜನ ಹಳ್ಳಿಗರ ಅಭಿಪ್ರಾಯವೂ ಹಾಗೇ ಇದ್ದಿತು. ಶಾಲಾ ಶಿಕ್ಷಣದಿಂದ ಮಕ್ಕಳು ಬದುಕಲು ಏನೂ ಕಲಿಯುವುದಿಲ್ಲ. ಮಕ್ಕಳಿಗೆ ಶಾಲೆಯು ಅನಾಕರ್ಷಣೀಯ ವೆನಿಸಿತ್ತು ಹಾಗೂ ಅಪ್ರಸ್ತುತವೆನಿಸಿತ್ತು. ಅವರ ಕುಟುಂಬಗಳಿಗೆ ಅವರು ದುಡಿಯುವುದು ಆದ್ಯತೆಯಾಗಿತ್ತು. 'ಈ ಬಗ್ಗೆ ಏನಾದೂ ಮಾಡಬೇಕು ನಾನು ನಿರ್ಧರಿಸಿದೆ ನಾನು ಶಾಲೆಯ ವೇಳಾಲಪಟ್ಟಿಯಲ್ಲಿ ಬದಲಾವಣೆ ಮಾಡಿದೆ'. '2 ಅವಧಿಯ ಚಟುವಟಿಕೆಯನ್ನು ಸೇರಿಸಿದೆ. ಒಂದು ಮುಂಜಾನೆಯ ಪ್ರಾರ್ಥನೆಯ ನಂತರ ಇನ್ನೊಂದು ಮಧ್ಯಾಹ್ನದ ಊಟದ ನಂತರ'. ಈ ಅವಧಿಗಳಲ್ಲಿ ನಾವು ಮಕ್ಕಳಿಗೆ ಕೆಲಸದ ಕೌಶಲ, ಕಲೆ ಮತ್ತು ಕೈ ಕೆಲಸ ಇಟ್ಟೆವು. ಶೀಘ್ರದಲ್ಲಿಯೆ ನಾವು ಮಕ್ಕಳು ಮಾಡಿದ ವಸ್ತುಗಳನ್ನು ಪ್ರದರ್ಶನಕ್ಕೆ ಇಟ್ಟೆವು. ಇದರ ಸುದ್ಧಿ ಹುಡುಗರಿಂದ ಹುಡುಗರಿಗೆ , ಪೋಷಕರಿಗೆ, ಸಾರ್ವಜನಿಕರಿಗೆ ಹಬ್ಬಿತು. ಶಾಲೆಗೆ ಬರುವ ಮಕ್ಕಳ ಸಂಖ್ಯೆ ಹೆಚ್ಚಾಗ ತೊಡಗಿತು. 'ಆಗ ನಾನು ಗಮನಿಸಿದ ಇನ್ನೊಂದು ಸಂಗತಿ ಮಕ್ಕಳಲ್ಲಿ ಸ್ವಚ್ಛತೆ ಇಲ್ಲದಿರುವುದು.' ಬಹಳಷ್ಟು ಮಕ್ಕಳು ಹರಕು ಬಟ್ಟೆಯುಟ್ಟು ಸ್ನಾನ ಶೌಚಾದಿಗಳಿಲ್ಲದೇ ಬರುತ್ತಿದ್ದರು.

'ನಾನು ಮತ್ತೊಮ್ಮೆ ಹಳ್ಳಿಗೆ ಹೋಗಿ ಈ ಬಾರಿ ಮಕ್ಕಳ ತಾಯಂದಿರನ್ನೂ ಭೇಟಿ ಮಾಡಿದೆ. ನಾನು ಅವರಿಗೆ ಹೇಳಿದ್ದು, 'ನಾವು ಶಾಲೆಯನ್ನು, ದೇವರ ಪ್ರಾರ್ಥನೆಯೊಂದಿಗೆ ಆರಂಭ ಮಾಡುತ್ತೇವೆ. ಅಂತಹ ಸಮಯದಲ್ಲಿ ಮಕ್ಕಳು ಸ್ನಾನ ಶೌಚಾದಿಗಳಿಲ್ಲದೆ ಬರುವುದು, ಎಷ್ಟೊಂದು ಅಶುಭಕರ'ವೆಂದು ಪ್ರಶ್ನಿಸಿದೆ. ನಾನು ಇನ್ನೊಂದು ಉಪಾಯ ಮಾಡಿದೆ. ಪ್ರತಿದಿನ ಅಸೆಂಬ್ಲಿಯಲ್ಲಿ, ಸ್ವಚ್ಛವಾಗಿ ನೀಟಾಗಿ ಬರುವ ವಿದ್ಯಾರ್ಥಿಗಳನ್ನು ಆ ದಿನದ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯೆಂದು ಘೋಷಿಸಲಾರಂಭಿಸಿದೆ.

ಚಟುವಟಿಕೆಯ ಅವಧಿಗಳಲ್ಲಿ ವಿದ್ಯಾರ್ಥಿಗಳಿಗೆ ಚಟುವಟಿಕೆಯ ಆಯ್ಕೆಯನ್ನು ಅವರಿಗೇ ಬಿಟ್ಟೆನು. ಕೆಲವರು ಓದು ಬರಹವನ್ನೇ ಮುಂದುವರಿಸಿದರು. ನಾನು ಅವರಿಗೆ ಎಲ್ಲಿಯಾದರೂ ಬರೆಯಲು ಸ್ವಾತಂತ್ರ್ಯ ನೀಡಿದೆ. ಬಾಳೆ ಎಲೆಗಳು ಬಹಳ ಮೆಚ್ಚುಗೆಯ ಬರವಣಿಗೆ ವಸ್ತುವಾಯಿತು. ನಾನು ಅವರಿಗೆ ಪದ–ರಚನೆ, ಪದ –ಬಂಧ ಆಡಲು ಪ್ರೋತ್ಸಾಹ ನೀಡಿದೆ. ಲೆಕ್ಕಗಳನ್ನೂ, ಕೋಲಿನ ಸಹಾಯದಿಂದ ನೆಲದ ಮೇಲೆ ಬರೆದು, ಬಿಡಸಲು ಹೇಳುತ್ತಿದ್ದೆ. ಅವರು ಮನೆ ಪಾಠವನ್ನು, ಬಾಳೆ ಎಲೆ ಅಥವಾ ಅವರಿಗೆ ಸಿಗುವ ಇನ್ನಾವುದೇ ವಸ್ತುಗಳ ಮೇಲೆ ಮಾಡಲು ಅವಕಾಶ ನೀಡಿದೆ.

ನಾನು ಈಗ ಈ ಶಾಲೆಗೆ ಒಂದು 4 ವರ್ಷಗಳಾಯಿತು. ಹಾಗೂ ಬಹಳ ಬದಲಾವಣೆಗಳನ್ನು ಮಾಡಿದ್ದೇನೆ. ಈಗ ಅಲ್ಲಿ 257 ವಿದ್ಯಾರ್ಥಿಗಳಿದ್ದಾರೆ; ಹಾಗು ದಿನಂ ಪ್ರತಿ ಹಾಜರಾತಿ 240ರ ಮೇಲಿದೆ. ಅವರು ಸ್ವಚ್ಛವಾಗಿ ಬರುತ್ತಾರೆ ಹಾಗು ಆ ಬಗ್ಗೆ ಹೆಮ್ಮೆ ಹೆಮ್ಮೆ ಪಡುತ್ತಾರೆ. ಮತ್ತು ಕಲಿಯು ಇಷ್ಟ ಪಡುತ್ತಾರೆ. ಒಮ್ಮೆ ನೀವು ಅವರಿಗೆ ಚುರುಕು ಮಾಡಿದರೆ, ಎಲ್ಲ ಮಕ್ಕಳಲ್ಲೂ ಕಲಿಯುವ ಸಾಮರ್ಥ್ಯ ಇದೆ ಎಂದು ತೋರಿಸಿಕೊಟ್ಟಿದ್ದೇನೆ.

ಕುಟುಂಬಗಳೊಡನೆ ಸಂಬಂಧ ಬೆಳೆಸುವುದು ಬಹಳ ಮುಖ್ಯ ವಾಗಿದ್ದರೂ, ಮಕ್ಕಳ ಇಷ್ಟಗಳನ್ನು ಗಮನದಲ್ಲಿಟ್ಟುಕೊಂಡು ಪಠ್ಯಕ್ರಮದಲ್ಲಿ ಬದಲಾವಣೆ ಮಾಡಿಕೊಂಡಿದ್ದು ಅತ್ಯಂತ ಪ್ರಮುಖ ವ್ಯತ್ಯಾಸವೆಂಬುದು ನನ್ನ ನಂಬಿಕೆ. ಇದರಿಂದ ಓದು – ಬರಹಕ್ಕೆಂದು ಮಿಸಲಿಟ್ಟ ಸಮಯ ಕಡಿಮೆಯಾದರೂ, ಅವರನ್ನು ಶಾಲೆಗೆ ಬರಲು ಹಾಗು ದಿನವೀಡಿ ಶಾಲೆಯಲ್ಲಿ ಉಳಿಯಲು ಪ್ರೋತ್ಯಾಹಿಸಿತು. ಅವರು ಓದು, ಬರಹ ಹಾಗು ಗಣಿತದ ಪ್ರಾಮುಖ್ಯತೆಯನ್ನು ಅರಿಯಲಾರಂಭಿಸಿದರು. ಹಾಗು ಅದು ಹೇಗೆ ನಿಜ ಜೀವನದಲ್ಲಿ ಅನ್ವಯವಾಗುವುದೆನ್ನುವುದನ್ನು ಮನನ ಮಾಡಿಕೊಂಡರು.

## ಚಟುವಟಿಕೆ –2 ನಾಯಕತ್ವದ ಗುಣಗಳನ್ನು ಗುರುತಿಸುವುದು

ತಖ್ತೆ–1 ನ್ನು ಪುನ: ಓದಿಕೊಳ್ಳಿ , ಇದು ಉತ್ತಮ ನಾಯಕರ ಗುಣಗಳನ್ನು ಹೇಳುತ್ತದೆ.

ಒಬ್ಬ ಸ್ನೇಹಿತರೊಂದಿಗೆ, ಅಥವಾ ಸಹೋದ್ಯೋಗಿಯೊಂದಿಗೆ, ವ್ಯಕ್ತಿಗತ –ಅಭ್ಯಾಸ–1ನ್ನು ವಿಶ್ಲೇಷಣೆ ಮಾಡಿ. ಹಾಗೂ ಶ್ರೀಮತಿ ಅಪರಾಜಿತೆಯಲ್ಲಿ ತಖ್ತೆ 1ರಲ್ಲಿನ ಯಾವ ಗುಣಗಳನ್ನು ಕಾಣಲಾಯಿತು, ಎಂಬುದನ್ನು ಗುರುತಿಸಿರಿ. ಇವನ್ನು ನಿಮ್ಮ **ಕಲಿಕಾ ದಿನಚರಿಯ**ಲ್ಲಿ ಬರೆಯಿರಿ ಹಾಗು ಪ್ರಮುಖ ಪದಗಳನ್ನು ಹೈಲೈಟರ್‌ನ ಸಹಾಯದಿಂದ ಗುರ್ತುಮಾಡಿ.

**ಚರ್ಚಾಂಶಗಳು:**

ಅಪರಾಜಿತಯ ತನ್ನ ವಿದ್ಯಾರ್ಥಿಗಳು ಶಾಲೆಯಲ್ಲಿ ಯಾಕೆ ಇಲ್ಲಿ ಎಂಬುದನ್ನು ಕಂಡುಹಿಡಿಯಲು ಶಿಕ್ಷಣದ ಒಂದು ದೊಡ್ಡ ಚಿತ್ರವನ್ನು ಹಾಗು ಅವಳಲ್ಲಿದ್ದ

ಸಹಜ ಪ್ರವೃತ್ತಿಯನ್ನು ಉಪಯೋಗಿಸಿಕೊಂಡು, ಅವಳು ಮಕ್ಕಳು ಶಾಲೆಯ ಬಗ್ಗೆ ಇರುವ ದೋರಣೆಯನ್ನು ಸವಾಲಾಗಿ ಎದುರಿಸಿದರು ಹಾಗು ಇದಕ್ಕೆ ಉತ್ತರವನ್ನು ಕಂಡುಹಿಡಿಯಲು ಹೊರಟರು. ಇದನ್ನು ಶಾಲೆ ಹೊರಗಿರುವ ಮಕ್ಕಳು ಮತ್ತು ಪೋಷಕರೊಂದಿಗೆ ಸಹಭಾಗಿತ್ವದಲ್ಲಿ ಚರ್ಚಿಸಿ ತಿಳಿದುಕೊಂಡರು. ಅವರು ಅಲ್ಪಕಾಲೀನ ಪರಿಣಾಮಕ್ಕಿಂತ ದೀರ್ಘಾವಧಿ ಪ್ರಯತ್ನ ಮಾಡಿ ನಿಧಾನವಾಗಿ ಮಕ್ಕಳ ದಾಖಲಾತಿ ಹಾಗು ಹಾಜರಾತಿಯಲ್ಲಿ ಸುಧಾರಣೆ ಕಂಡರು. ಅವರು ಮಕ್ಕಳ ಶಿಕ್ಷಣದ ಬಗ್ಗೆ ಘಟ್ಟಿಯಾದ ಬದ್ಧತೆ ಕೋರಿದರು. ಹಾಗು ಮಕ್ಕಳ ಆರ್ಥಿಕ ಪರಿಸ್ಥಿಯ ಬಗ್ಗೆಯೂ ಗೌರವಯುತವಾಗಿ ವರ್ತಿಸಿದರು.

ಚಟುವಟಿಕೆ –2ರ ನಂತರ ನೀವು ಶಾಲಾ ನಾಯಕರ ಬಗ್ಗೆ ಇರುವ ವೀಡಿಯೋಗಳನ್ನು ವೀಕ್ಷಿಸಲು ಇಚ್ಛಿಸಬಹುದು ಹಾಗು ಉತ್ತಮ ನಾಯಕರ ಬಗ್ಗೆ ಅವರ ಮಾತುಗಳ ವಿಶ್ಲೇಷಣೆ ಮಾಡಬಹುದು.



Video: School Leadership

# 3 ಅವಶ್ಯಕತೆಗಳ ವಿಶ್ಲೇಷಣೆ ಮಾಡುವುದು

ತಖ್ತೆ 1, ಸ್ವಭಾವತ: ಗುಣಗಳ ಜೊತೆಗೆ ಶಾಲಾ ನಾಯಕರಿಗೆ ಹಲವಾರು ರೀತಿಯ ಸಾಮರ್ಥ್ಯಗಳು ಇರಬೇಕೆನ್ನುವುದನ್ನು ಸೂಚಿಸುತ್ತದೆ. ಎಲ್ಲ ಶಾಲಾ ನಾಯಕರಲ್ಲಿಯೂ ಈ ಎಲ್ಲ ಸಾಮರ್ಥ್ಯಗಳು ಎಲ್ಲ ಕ್ಷೇತ್ರದಲ್ಲಿ ಸರಿ ಸಮವಾಗಿ ಇರುವುದು ದುಸ್ಸಾಧ್ಯವಾಗಿರುತ್ತದೆ. ಅದಲ್ಲದೆ ನಿಮ್ಮ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ರೀತಿಯಲ್ಲಿಯೇ ನಿಮ್ಮ ಜ್ಞಾನ ಮತ್ತು ಕೌಶಲಗಳು, ಕಾಲದಿಂದ ಕಾಲಕ್ಕೆ ಹೊಸ ಸವಾಲುಗಳು, ಜಬಾಬ್ದಾರಿಗಳ ಬೇಡಿಕೆಗಳಗನುಸಾರ, ವಿಕಸನ ಹೊಂದುತ್ತಿರುತ್ತವೆ ಎಂಬುದನ್ನು ಸದಾ ನೆನಪಿನಲ್ಲಿ ಇಡುವುದು ಬಹಳ ಮುಖ್ಯವಾಗುತ್ತದೆ.

## ಚಟುವಟಿಕೆ–3 ಅವಶ್ಯಕತೆಯ ವಿಶ್ಲೇಷಣೆ ಮಾಡುವುದು

ಇದರಲ್ಲಿ ಅಡಕವಾಗಿರುವ ಸಂಪನ್ಮೂಲ 3ರಲ್ಲಿರುವ ತಖ್ತೆಯನ್ನು ಭರ್ತಿ ಮಾಡುವ ಮೂಲಕ ನಿಮ್ಮಲ್ಲಿ ಶಾಲಾ ನಾಯಕನ ಪಾತ್ರ ಯಾವ ಯಾವ ರೂಪದಲ್ಲಿ ನೀವು ಚೆನ್ನಾಗಿ ಮಾಡಬಲ್ಲಿರಿ, ಯಾವ ಯಾವ ರೂಪದಲ್ಲಿ ಇನ್ನೂ ಸುಧಾರಣೆ ಅವಶ್ಯವಿದೆ. ಹಾಗು ಯಾವುದು ಕೊರತೆಗಳಿವೆ ಎಂಬುದನ್ನು ಗುರುತಿಸಿಕೊಳ್ಳಿ. ಮೊದಲಿಗೆ ಬೇರೆ ಬೇರೆ ರೂಪದಲ್ಲಿ ನಿಮ್ಮನ್ನೆ ನೀವು ಅಳೆದುಕೊಳ್ಳಿ – ಬಹಳ ಸಮರ್ಥ, ಸಾಕಷ್ಟು ಸಮರ್ಥ, ಬಹಳ ಕಡಿಮೆ ಸಮರ್ಥ–ಉಳ್ಳವರು. ನಿಮಗೆ ಈಗಾಗಲೇ, ಬಹಳಷ್ಟು ಜ್ಞಾನವಿರುವುದು ಸಂಶಯಾತೀತ. ಆದರೂ ನೀವು ಈ ಮೇರೆಗಳನ್ನು ವಿಸ್ತರಿಸಬಲ್ಲಿರಿ; ಅಥವಾ ಪರಿಷ್ಕರಿಸಿ ಕೊಳ್ಳಬಹುದು. ಆ ಮೂಲಕ ಇನ್ನೂ ಹೆಚ್ಚು ಸಮರ್ಥವಾಗಿ, ಪರಿಣಾಮಕಾರಿಯಾಗಿ ಶಾಲಾ ನಾಯಕರ ಪಾತ್ರ ವಹಿಸಬಲ್ಲಿರಿ.

ನೀವು ಈ ಪ್ರಕ್ರಿಯೆಯನ್ನು ನಿಮ್ಮ ಸಹೋದ್ಯೋಗಿಯೊಡನೆ ಮಾಡುತ್ತಾ, ನಿಮ್ಮಲ್ಲಿ ಯಾವ ಯಾವ ಗುಣಗಳು ಯಾವ ಯಾವ ಮಟ್ಟದಲ್ಲಿದೆ, ಮತ್ತು ಯಾವ ರೀತಿಯಲ್ಲಿ ಕೊರತೆಗಳು (ಅವಶ್ಯಕತೆ) ಇವೆ ಎಂದು ಚರ್ಚಿಸಬಹದು. ಒಬ್ಬ ಶಾಲಾನಾಯಕ ಒಬ್ಬಂಟಿಯಾಗಿರುವ ಸಾಧ್ಯತೆ ಬಹಳ ಆದ್ದರಿಂದ ಸಮಾನರೊಂದಿಗಿನ ಆಪ್ತ ಸಲಹೆಗಾರ ಸಂಬಂಧಗಳು ಇಬ್ಬರಿಗೂ ಸಹಾಯಕವಾಗುತ್ತವೆ. ಹೇಗೆ ಇಬ್ಬರು ಶಾಲಾ ನಾಯಕರು ತಮ್ಮ ಅವಶ್ಯಕತೆಗಳನ್ನು ಅರಿಯಲು ಪರಸ್ಪರವಾಗಿ ಸಹಾಯವಾದರೆಂಬುದನ್ನು ತಿಳಿಯಲು **ವ್ಯಕ್ತಿಗತ ಅಭ್ಯಾಸ 2–** ನ್ನೂ ಓದಿಕೊಳ್ಳಿ.

## ಘಟನಾಭ್ಯಾಸ –2 ಶ್ರೀ ಕಪೂರ್ ಮತ್ತು ಶ್ರೀಮತಿ ಅಗರ್‌ವಾಲ್ ತಮ್ಮ ಅವಶ್ಯಕತೆ ಅರಿಯಲು ಮಾಡಿದ ಸಂವಾದ

ಶ್ರಿ. ಕಪೂರ್ ಮತ್ತು ಶ್ರೀಮತಿ.ಅಗರ್ವಾಲ್ ಇತ್ತೀಚೆಗೆ ಪರಸ್ಪರ ಬೇಟ್ಟಿಯಾಗಿದ್ದರು. ಅವರುಗಳು, ಬಹಳಷ್ಟು ವಿಚಾರಗಳಲ್ಲಿ, ತಮ್ಮಿಬ್ಬರಲ್ಲಿ ಸಾಮ್ಯತೆ ಇರುವುದನ್ನು ಕಂಡುಕೊಂಡರು. ಅವರು ಪರಸ್ಪರ ಒಬ್ಬರಿಗೊಬ್ಬರು ಬೆಂಬಲಿಸಲು, ಪ್ರತಿ ತಿಂಗಳು ಒಂದೆಡೆ ಸೇರಲು ಏರ್ಪಾಡು ಮಡಿಕೊಂಡರು. ಉದಾಹರಣೆಗಳನ್ನು ಕಂಡುಕೊಳ್ಳಲು ಒಬ್ಬರಿಗೊಬ್ಬರು ಸಹಾಯ ಮಾಡಿಕೊಳ್ಳುತ್ತಾ, ಒಬ್ಬರಿಗೊಬ್ಬರು ಪ್ರಶ್ನಿಸುತ್ತಾ, ಘಟಕದ ಮೂರನೇ ಚಟುವಟಿಕೆಯನ್ನು ಒಟ್ಟೊಟ್ಟಿಗೆ ಅಭ್ಯಸಿಸಲು ತೀರ್ಮಾನಿಸಿಕೊಂಡರು. “ನಡವಳಿಕೆಗಳನ್ನು ಮಾದರಿಯಾಗಿಸುವ ಗುಣಗಳ ಬಗ್ಗೆ” ಅವರ ಸಂಭಾಷಣೆಯನ್ನು ಓದಿರಿ.

ಮಿತ್ರರೇ– ತಾವು ಹೇಗೆ ನಿಮ್ಮ ವ್ಯಕಿಗತ ನಿಯತ್ತ/ಪ್ರಾಮಾಣಿಕತೆ/ಸಮಗ್ರತೆ ಯನ್ನು ಹೇಗೆ ಪ್ರದರ್ಶಿಸುತ್ತಿರೆಂದು ಹೇಳಬಹದೇ?.

ನಾನು ನನ್ನ ಶಿಕ್ಷಕರೊಂದಿಗಿನ ಹಾಗು ವಿದ್ಯಾರ್ಥಿಗಳೊಂದಿಗೆ ಯಾವಾಗಲೂ ದೃಢವಾಗಿ/ಸುಸಂಗತವಾಗಿ ವ್ಯವಹರಿಸುತ್ತೇನೆ.
ನಾನು ಯಾವಾಗಲೂ ಎಲ್ಲರನ್ನೂ ಗೌರವಯುತವಾಗಿ ಕಾಣುತ್ತೇನೆ. ಈ ನಿಟ್ಟಿನಲ್ಲಿ ನನ್ನಲ್ಲಿ ಉಚ್ಚಮಟ್ಟದ ಮಾನದಂಡಗಳನ್ನು ಅನುಸರಿಸುತ್ತೇನೆ.

ಈ ವಾರದಲ್ಲಿ ನಡೆದ ಒಂದು ಘಟನೆಯನ್ನು ಉದಾರಣೆ ಕೊಡಬಲ್ಲಿರಾ?

ಈಗ ನೀವು ನನ್ನನ್ನು ಕಟಕಟಿಗೆ ತಂದಿರಿ, ಮಿತ್ರರೆ! ನೀವು ಹೇಳುವುದು, ನಿಜ! ನಾವು ಬಾಯಲ್ಲಿ ದೊಡ್ಡ ಪದಗಳನ್ನು ಸುರಿಸಬಹುದು.ಆದರೆ ಕೃತಿಯಲ್ಲಿ ಕೋರುವುದು ಕಷ್ಟ. ಸ್ವಲ್ಪ ಯೋಚಿಸುವೆ--------- ನಾನು ಶಾಲೆಯ ಎಲ್ಲ ವಿದ್ಯಾರ್ಥಿಗಳು ಸಮಾನರು ಎಂದು ಘೋಷಿಸಿದ್ದೇನೆ. ಆದರೆ ಇತ್ತೀಚಿಗೆ, ಒಂದು ಕುಟುಂಬ ದಿಂದ ಅವರ ಇಬ್ಬರು ಮಕ್ಕಳನ್ನು ತರಗತಿಯಲ್ಲಿ ನಗಣ್ಯ ಮಾಡಲಾಗುತ್ತಿದೆ. ಎಂಬ ದೂರು ಬಂದಿತ್ತು ನಾನು ಈ ಬಗ್ಗೆ ಕರದೂರು ನಡೆಸಿದ ಆ ತರಗತಿಯ ಶಿಕ್ಷಕರು ಹಾಗು ಇಬ್ಬರು ಮಕ್ಕಳೊಂದಿಗೆ ಮಾತನಾಡಿದೆ. ಈ ವಿಷಯವನ್ನು ಒಂದು ತಿಂಗಳು ಮೇಲ್ವಿಚಾರಣೆ ಮಾಡುತ್ತಾ ಆ ನಂತರ ಕುಟುಂಬದವರರೊಡನೆ ಮಾತನಾಡಲು ನಿರ್ಧರಿಸಿದ್ದೇನೆ.

ಹೌದು ಈ ಮೂಲಕ ನಿಮ್ಮ ಸಮಗ್ರತೆಯನ್ನು ಪ್ರದರ್ಶಿಸಿದ್ದೀರಿ ಹಾಗು ನಿಮ್ಮ ಮೌಲ್ಯಗಳನ್ನು ದೃಢಪಡಿಸಿದ್ದೀರೆಂದು ಅನ್ನಿಸುತ್ತದೆ. ಈ ನೀವು ಯಾವಾಗಲು ಉತ್ಸುಕರಾಗಿರುತ್ತೀರಿ ಎಂದು ಹೇಳಿದ್ದೀರಿಲ್ಲ ; ಇದು ಯಾವಾಗಲೂ ಇರುತ್ತದೆಯೆ ಅಥವಾ ಯಾವಾದರೊಮ್ಮೆ ಒಂದು ಹೋಗುತ್ತಿರುತ್ತದೊ?

ನಿಮಗೆ ಗೊತ್ತಾ ನಾನು ಕಲಿಕೆಯ ಬಗ್ಗೆ ಯಾವಾಗಲೂ ತೀವ್ರಾಸಕ್ತನಾಗಿರುತ್ತೇನೆ. ಆದರೆ ಈ ತ್ರೀವಾಸಕ್ತಿಯನ್ನು ಯಾವಾಗಲೂ ಹೊರಸೂಸುತ್ತೇನೋ. ಇಲ್ಲವೋ ನನಗೆ ಖಚಿತವಾಗಿ ಹೇಳಲು ಆಗುವುದಿಲ್ಲ ಯಾಕೆಂದರೆ ಆದಿನ ನಡೆದ ಶಿಕ್ಷಕರ ಸಭೆಯಲ್ಲಿ ನಾನು ಗುಂಪು ಕಾರ್ಯದ ಬಗ್ಗೆ ಶಿಕ್ಷಕರೊಂದಿಗೆ ಮಾತನಾಡಿದೆ. ಆದರೆ ಅದಕ್ಕೆ ಹೆಚ್ಚು ಪ್ರತಿಕ್ರಿಯೆ ಬರಲಿಲ್ಲ.

ಗುಂಪು ಕಾರ್ಯದ ಬಗ್ಗೆ ಟೆಸ್ ಇಂಡಿಯಾದವರು ಮಾಡಿರುವ ವಿಡಿಯೋ ಮುದ್ರಣ ತಾವು ನೋಡಿದ್ದಿರಾ? ಅವು ಸಂವಾದ ಮುಂದುವರಿಸಲು ಅದ್ಭುತವಾಗಿ ತಂತ್ರ ಮಾಡಿದ್ದಾರೆ. ನೀವು ಅದನ್ನು ನಿಮ್ಮ ಜನ ಸಂವಾದ ಮುಂದುರವರೆಸಲು ಉಪಯೋಗಿಸಬಹುದು.

ಇದೊಂದು ಒಳ್ಳೇಯ ಉಪಾಯ ನಾನು ಸಹ ಶಿಕ್ಷಕರಿಗೆ ಗುಂಪು ಕೆಲಸ ತಂತ್ರ ಉಪಯೋಗಿಸಿಕೊಂಡು ಹೆಚ್ಚು ಹಿಮ್ಮಾಹಿತಿ ನೀಡಬಹುದೆಂದು ಯೋಚಿಸಿದ್ದೇನೆ. ಆ ಮೂಲಕ ಅವರ ಪ್ರಯತ್ನಗಳನ್ನು ನಾನು ಉತ್ಸುಕತೆಯಿಂದ ನೋಡುತ್ತೆನೆಂದು ತಿಳಿಸಬಹುದು.

ನಾವೀಗ ಶಿಕ್ಷರ ಅಭಿವೃದ್ಧಿಗಾಗಿ ಇರುವ ಮುಕ್ತ ಶೈಕ್ಷಣಿಕ ಸಂಪನ್ಮೂಲಗಳನ್ನು ನೋಡೋಣ ಹಾಗು ನೀವು ನಿಮ್ಮ ಶಿಕ್ಷಕರ ಉತ್ಸಾಹದ ಮುನ್ನಡೆಗಾಗಿ ಯಾವ ಸಂಪನ್ಮೂಲಗಳನ್ನು ಶಿಫಾರಸ್ಸು ಮಾಡಬಹುದೆಂದು ತಿಳಿಯೋಣ ನಾನು ವಿಜ್ಞಾನದ ಒಂದು ಪಾಠವನ್ನು ಸ್ವಂತ ಮಾಡಲು ನಿರ್ಧರಿಸಿದ್ದೇನೆ.

ಒಹ್! ನಾನಾಗಲೇ ಉತ್ಸಾಹಿಭರಿತನಾಗುತ್ತಿದ್ದೇನೆ.

# 4 ಕಲಿಕಾ ಯೋಜನೆಯನ್ನು ರೂಪಿಸುವುದು

ನಿಮ್ಮ ವೃತ್ತಿಪರ ಬೆಳವಣಿಗೆಗಳ ಅವಶ್ಯಕತೆಗಳ ಪಟ್ಟಿಯನ್ನು ತಯಾರು ಮಾಡಿಕೊಂಡ ನಂತರ, ನೀವು ಇವುಗಳ ಸಾಧನೆಗಾಗಿ ಒಂದು ಕಲಿಕಾ ಯೋಜನೆಯನ್ನು ಮಾಡಿಕೊಳ್ಳ ಬೇಕು. ಸಂಪನ್ಮೂಲ-3 ಈ ಬಗ್ಗೆ ಟೆಸ್-ಇಂಡಿಯಾ ಅಭಿವೃದ್ಧಿ ಪಡಿಸಿರುವ ಮುಕ್ತ ಸಂಪನ್ಮೂಲಗಳ ಯಾದಿಯನ್ನು ನೀಡುತ್ತದೆ.

ಈ ಘಟಕದ ಪೂರ್ಣಗೊಳಿಸಿದ ನಂತರ ಈ ನಿಟ್ಟಿನಲ್ಲಿ ಒಳ್ಳೇಯ ಆರಂಭ ಎಂದರೆ–"ಭೋದನೆ –ಕಲಿಕೆಯಲ್ಲಿ ಸಮಗ್ರ ಪರಿವರ್ತನೆ: ಪೂರ್ಣಗೊಳಿಸಿದ ನಂತರ ಕಲಿಸುವ – ಕಲಿಯುವ ಕ್ರಿಯೆಯಲ್ಲಿ ಸುಧಾರಣೆಗಳ ಮುನ್ನಡೆಯನ್ನು ಅಭ್ಯಸಿಸುವುದು. ಇದು ಟೆಸ್ ಇಂಡಿಯಾ ಮೂಲ ಬೋಧನಾ ಶಾಸ್ತ್ರ ಗಮನ ದಲ್ಲಿರಿಸಿಕೊಂಡು ರಚಿಸಲಾಗಿದೆ. ಹಾಗು ಅಧ್ಯಪನದ ಬಗ್ಗೆ ಇರುವ ಸಂಪನ್ಮೂಲಗಳನ್ನು ಹುಡುಕಲು ಸಹಾಯ ಮಾಡುವುದು. ಇವೆಲ್ಲ ಸಂಪನ್ಮೂಲಗಳು ಮುಕ್ತ ಶೈಕ್ಷಣಿಕ ಸಂಪನ್ಮೂಲಗಳು– ಎಂದರೆ ನಿಮಗೆ ಉಚಿತವಾಗಿ ದೊರಕುವಂತವು; ನೀವು ಇದರ ನಕಲುಗಳನ್ನು ಮಾಡಿಕೊಂಡು, ಅವನ್ನು ನಿಮ್ಮ ಸಂದರ್ಭಗಳಿಗೆ ಅವಶ್ಯಕತೆಗಳಿಗೆ ಮಾರ್ಪಾಡು ಮಾಡಿಕೊಂಡು ಉಪಯೋಗಿಸಿಕೊಳ್ಳಬಹುದು.

## ಚಟುವಟಿಕೆ 4: ಟೆಸ್–ಇಂಡಿಯಾದವರ ಮುಕ್ತ ಶೈಕ್ಷಣಿಕ ಸಂಪನ್ಮೂಲಗಳನ್ನು ಬಳಸಿಕೊಂಡು ನಿಮ್ಮ ಕಲಿಕಾ ಯೋಜನೆ ತಯಾರಿಸುವುದು

ಈ ಕೆಳಗಿನ ಮೆಟ್ಟಿಲಗಳನ್ನು ಅನುಸರಿಸಿ ನಿಮ್ಮ ಕಲಿಕಾ ಯೋಜನೆಯನ್ನು ಸೃಷ್ಟಿಸಿಕೊಳ್ಳಬಹುದು.

1. **ಸಂಪನ್ಮೂಲ –3**ರಲ್ಲಿ ನಮೂದಿಸಿರುವ ಸಂಪನ್ಮೂಲಗಳ ತಲೆ ಬರಹವನ್ನು ನೋಡಿ; ಪ್ರತಿ ಸಂಪನ್ಮೂಲವು ಕ್ರಮಿಸುವ ವಿಷಯಗಳನ್ನು ಹುಡುಕಿರಿ. ಯಾವ ರೀತಿಯನ್ನು ಘಟಕಗಳನ್ನು ಗುಂಪು ಮಾಡಲಾಗಿದೆ ಎಂಬುದನ್ನು ಅಭ್ಯಸಿಸಿರಿ ಉದಾಹರಣಗಾಗಿ:– ನಿಮ್ಮ ಶಿಕ್ಷಕರ ಅಭಿವೃದ್ಧಿಗಾಗಿ 3 ಘಟಕಗಳಿವೆ.
2. ನೀವು ಅಭ್ಯಸಿಸಲು ಇಚ್ಛಿಸುವ 3 ಘಟಕಗಳನ್ನು ಗುರುತಿಸಿ ಹಾಗು ಅವನ್ನು ಯಾವ ಕ್ರಮದಲ್ಲಿ ಅಭ್ಯಸಿಸುತ್ತೀರಿ ಎಂಬುದನ್ನು ನಿಮ್ಮ **ಕಲಿಕಾ–ದಿನಚರಿ**ಯನ್ನು ನಮೂದಿಸಿರಿ,
3. ನೀವು ಆಯ್ಕೆ ಮಾಡಿದ ಮೂರು ಘಟಕಗಳನ್ನು ಮತ್ತೊಮ್ಮೆ ವಿವರವಾಗಿ ಓದಿರಿ ಹಾಗು ಪ್ರತಿ ಘಟಕದ ಅಭ್ಯಾಸಕ್ಕೆ ಬೇಕಾಗುವ ಅವಧಿಯನ್ನು ಅಂದಾಜು ಮಾಡಿ.
4. ಒಂದು ಅವಧಿಗೆ ಯೋಜನೆ ತಯಾರಿಸಿ ನಿಮ್ಮ ಕಾರ್ಯಗಳನ್ನು ಆದ್ಯತೀಕರಿಸಿರಿ, ನೀವು ಭಾಗವಹಿಸಬೇಕಾದ ಇತರೇ ಯಾವುದಾದರೂ ಅಧ್ಯಯನಗಳು ಬೇರೆ ಯಾವುದಾದರೂ ಯೋಜನೆ ಅನುಷ್ಠಾನದಲ್ಲಿ ನಿಮ್ಮ ಬದ್ಧತೆಗಳು, ಇತ್ಯಾದಿಗಳು.

ಸಂಪನ್ಮೂಲ–4 ನ್ನು ನಿಮ್ಮ ಕಲಿಕಾ ಯೋಜನೆಯನ್ನು ದಾಖಲಿಸಲು ಬಳಸಿರಿ. ಅದನ್ನು ನಿಮ್ಮ ಕಾರ್ಯಾಲಯದಲ್ಲಿ ಒಂದು ಎದ್ದು ಕಾಣುವ ಜಾಗೆಯಲ್ಲಿ ಪ್ರದರ್ಶಿಸಿರಿ ಪ್ರತಿ ವಾರವೂ ಅದನ್ನು ಅನ್ವಯಿಸಿಕೊಳ್ಳಿ. ಕಡೆಯದಾಗಿ ಎಲ್ಲ ಸಂಪನ್ಮೂಲಗಳನ್ನು ಯಾವ ರೀತಿ ಪಡೆಯುತ್ತೀರಿ, ಎಂಬುದನ್ನು ತೀರ್ಮಾನಿಸಿಕೊಳ್ಳಿ. (ಕಂಪ್ಯೂಟರ್ ಮೂಲಕ ನೇರವಾಗಿ ಅಥವಾ ಮುದ್ರಿತ ಪ್ರತಿಗಳು) ಹಾಗು ಈ ಅಭ್ಯಾಸದಲ್ಲಿ ನೀವು ತೊಡಗಿಸಿಕೊಳ್ಳಬಹುದಾದ ಯಾವುದಾದರೂ ವ್ಯಕ್ತಿಯನ್ನು ಗುರುತಿಸಿಕೊಳ್ಳಿ.

# 5 ನಿಮ್ಮ ಕಲಿಕಾ ಯೋಜನೆಯನ್ನು ಆಚರಣೆಗೆ ತರುವುದು – ಶಾಲಾ ನಾಯಕರು ಸಾಧ್ಯಕರ್ತರಾಗುವುದು

ಶಾಲೆಯಲ್ಲಿ ಕಲಿಸುವ ಪ್ರಕ್ರಿಯೆಗಳಲ್ಲಿ ಮಹತ್ತರ ಬದಲಾವಣೆ ತರಲು ಬೇಕಾದ ಅತ್ಯಂತ ಪ್ರಮುಖ ಅಂಶವೆಂದರೆ ಶಾಲಾ ನಾಯಕತ್ವ– ಅಂದರೆ ನಿಮ್ಮಲ್ಲಿ ಇರುವ ಗುಣಗಳು ಮತ್ತು ಸಾಮರ್ಥ್ಯಗಳು. ನಿಮ್ಮ ಶಿಕ್ಷಕರು ಅವರ ಸಾಂಪ್ರದಾಯಿಕ ರೂಢಿಗತ ಶಿಕ್ಷಣ ಪದ್ಧತಿಗಳಿಂದ ವಿಮುಖರಾಗಿ ಪ್ರಯೋಗಶೀಲರನ್ನಾಗಿಸಲು ನಿಮಗೆ ಸಾಧ್ಯವಾಗದಿದ್ದರೆ, ವಿದ್ಯಾರ್ಥಿಗಳ ಕಲಿಕೆಯಲ್ಲಿ ಬದಲಾವಣೆ ಬರುವುದಿಲ್ಲ.

ನೀವೇ ಜೀವನಪರ್ಯಂತ ಕಲಿಕಾರ್ಥಿಗಳಾದರೆ ಮಾತ್ರ ನೀವು ನಿಮ್ಮ ಶಿಕ್ಷಕರನ್ನು ಬದಲಾಯಿಸಲು ಸಾಧ್ಯ; ನಿಮ್ಮ ಕಲಿಕೆಯನ್ನು ನವೀನತೆಗಳನ್ನು ತಂದು, ಶಾಲೆಯಲ್ಲಿನ ಸಮಸ್ಯೆಗಳನ್ನು ಪರಿಹರಿಸಲು ಬಳಸಲು ಸಾಧ್ಯ. ಶಿಕ್ಷಕರು ಬದಲಾಗಲು ನಿಮ್ಮಿಂದ ಪ್ರೋತ್ಸಾಹ ಬಯಸುತ್ತಾರೆ. ನೀವು ಈ ಕೆಳಗಿನ ರೀತಿಯಲ್ಲಿ ಅವರಿಗೆ ಮಾರ್ಗದರ್ಶನ ಮತ್ತು ಅವಕಾಶಗಳನ್ನು ಸೃಷ್ಟಿ ಮಾಡಬಹುದು.

- ಹೊಸ ವಿಚಾರಗಳನ್ನು ಪ್ರಯೋಗಗಳನ್ನು ಪ್ರಯತ್ನಿಸುವುದು
- ಶಿಕ್ಷಕರಿಗೆ ಕಾಲಕಾಲಕ್ಕೆ ಹಿಮ್ಮಾಹಿತಿ ನೀಡುವುದು
- ಅವರ ತರಗತಿಗಳನ್ನು ನಡೆಯುತ್ತಿರುವ ಧನಾತ್ಮಕ ಅಂಶಗಳ ಬಗ್ಗೆ ಹಂಚಿಕೊಂಡು ಪರ್ಯಾಲೋಚನೆ ಮಾಡುವುದು
- ಸುಧಾರಣೆಗಾಗಿ ಬೇರೇನು ಪರ್ಯಾಯಗಳಿವೆ ಎಂಬುದರ ಬಗ್ಗೆ ಮುಕ್ತ ಸಂವಾದ ನಡೆಸುವುದು

ಈ ಮುಂದಿನ ಘಟನಾ ಅಭ್ಯಾಸ ನಿಮ್ಮ ಶಿಕ್ಷಕರ ಮಾತುಗಳನ್ನು ಆಲಿಸುವ ಹಾಗು ನಾಯಕತ್ವಕ್ಕಾಗಿ ಒಂದು ಕಾಲೇಜನ ಮಾರ್ಗವನ್ನು ಅಭಿವೃದ್ಧಿಪಡಿಸುವ ಅಗತ್ಯತೆಯನ್ನು ಎತ್ತಿ ತೋರಿಸುತ್ತದೆ. "ಸಾಧ್ಯವಾಗಿಸುವುದು" ಎಂದರೆ ನಿಮ್ಮ ಸಹೋದ್ಯೋಗಿಗಳೊಂದಿಗೆ ಕೆಲಸ ಮಾಡುತ್ತಾ, ಅವರ ಜೊತೆಗೂಡಿ ಸಂವಾದ ಸೃಷ್ಟಿಸುತ್ತಾ, **'ಅವರಿಂದ ನೀವು– ನಿಮ್ಮಿಂದ ಅವರು'** ಕಲಿಯುವ ವಾತಾವರಣ ಸೃಷ್ಟಿ ಮಾಡಬೇಕಾಗುತ್ತದೆ.

**ಸಾಧ್ಯಕರ್ತ**ನಾಗುವುದು ಎಂದರೆ, ಸಹಭಾಗಿತ್ವ ಕಲಿಕೆಯಾಗುವಂತೆ ಪರಿಸ್ಥಿತಿ ನಿರ್ಮಾಣಮಾಡಿ ಅದರಲ್ಲಿರುವ ಎಲ್ಲರೂ (ನಿಮ್ಮನ್ನೂ ಒಳಗೊಂಡಂತೆ) ಕಲಿಯುವಂತೆ ಮಾಡುವುದು ಎಂದರ್ಥ.

### ಘಟನಾ ಅಭ್ಯಾಸ 3 ಶಾಲೆಯನ್ನು ಹೊಸ ಬೆಳಕಿನಲ್ಲಿ ನೋಡುವುದು

*(ಇದು ಸ್ಥಳೀಯ ಡಯಟ್‌ನಲ್ಲಿ ಟೆಸ್–ಇಂಡಿಯಾ(ಒ.ಇ.ಆರ್) ಕೋರ್ಸನ್ನು ಭಾಗವಹಿಸಿದ ಒರ್ವ ಶಾಲಾ ನಾಯಕ ಜೊತೆಗಿನ ಸಂದರ್ಶನದ ಒಂದು ದಾಖಲಾತಿ ಅವನ ಶಾಲೆಯ ಚೆನ್ನಾಗಿ ಕೆಲಸ ಮಾಡುತ್ತಿದ್ದ ಅವರು ಶಾಲಾ ನಾಯಕರಾದ ನಂತರ ಹಾಜರಾತಿಯಲ್ಲಿ ಬಹಳ ಸುಧಾರಣೆ ಕಂಡು ಬಂದಿತು. ಅವರು ಜಿಲ್ಲಾ ಶೈಕ್ಷಣಿಕ ಅಧಿಕಾರಿಗಳೊಂದಿಗೆ ಹಾಜರಾತಿಯಲ್ಲಾದ ಸುಧಾರಣೆ ಶಾಲೆಯ ಸುದಾಣೆಗೆ ಕೈಗೊಳ್ಳ ಬಹುದೆಂದು ಸಾಕ್ಷಾತ್ಕಾರ ಪಡೆದರು).*

ಕೋರ್ಸನಲ್ಲಿ ನಮಗೆ ಟೆಸ್–ಇಂಡಿಯಾ (ಒ.ಇ.ಆರ್.) ಸಂಪನ್ಮೂಲಗಳನ್ನು ಪರಿಚಯಿಸಲಾಯಿತು. ಇವು ಶಾಲೆಯ ಪುನರ್ನೋಟ ಹಾಗೂ ಅಭಿವೃದ್ಧಿ ಯೋಜನೆ(ಶಾಲಾ ನಾಯಕತ್ವದ ಬಗ್ಗೆ ದೃಷ್ಟಿಕೋನ ; ಶಾಲೆಯ ಆಂತರಿಕ ಪುನರ್ನೋಟವನ್ನು ಮುನ್ನಡೆಸುವುದು ಹಾಗು ಶಾಲಾ ಅಭಿವೃದ್ಧಿ ಯೋಜನೆ ತಯಾರಿಸುವಲ್ಲಿ ಬೇಕಾದ ನಾಯಕತ್ವದ ದೃಷ್ಟಿಕೋನ) ನಾನು ನನ್ನ ಶಾಲೆಯಲ್ಲಿ ಹಾಜರಾತಿಯ ಸುಧಾರಣೆ ಬಗ್ಗೆ ಹಂಚಿಕೊಳ್ಳಲು, ಒಂದು ಅವಕಾಶಕ್ಕಾಗಿ ಕಾಯುತ್ತಿದ್ದೆ. ನಾವು ಶಾಲೆಯ ಸ್ವ ಪುನರ್ನೋಟದ ಘಟಕ ಮೇಲೆ ಕೆಲಸ ಮಾಡುತ್ತಿದ್ದಾಗ ನನಗೆ ಖುಷಿಯಾಗುತ್ತಿತ್ತು. ಏಕೆಂದರೆ ಬಹಳಷ್ಟು ವಿಷಯಗಳಲ್ಲಿ, ನಮ್ಮ ಶಾಲೆಯ ಚೆನ್ನಾಗಿ ನಡೆಯುತ್ತಿತ್ತು. ಆದರೆ, ಅಷ್ಟರಲ್ಲಿ ತರಬೇತಿದಾರರು ನಮಗೆ ಶಿಕ್ಷಕರ ಬಗ್ಗೆ ಒಂದಿಷ್ಟು ಪ್ರಶ್ನೆಗಳನ್ನು ಹಾಕಿದರು. ಹಾಗು 'ಶಿಕ್ಷಕರು ಶಾಲೆಯ ಬಗ್ಗೆ ಏನು ಆಲೋಚಿಸುತ್ತಿದ್ದಾರೆ.' ಎಂದು ಕೇಳಿದರು. ನಮ್ಮಲ್ಲಿ ಮೂವರು ಶಿಕ್ಷಕರಿದ್ದರೂ, ಅವರಲ್ಲಿ ಶಾಲೆಯ ಬಗ್ಗೆ ಏನು ಯೋಚಿಸುತ್ತಿದ್ದಾರೆಂದು ನನಗೆ ಗೊತ್ತೇ ಇರಲಿಲ್ಲ!!. ನಾನು ಶಾಲೆಯಲ್ಲಿ ಮಾಡಿದ ಬದಲಾವಣೆಗಳ ಬಗ್ಗೆ ಅವರು ಏನು ಅಭಿಪ್ರಾಯ ಹೊಂದಿದ್ದಾರೆಂದು ನನಗೆ ಗೊತ್ತಿರಲಿಲ್ಲ! ನಾನು ಅವರಿಗೆ ನಾನು ಹೇಳಿದ್ದನ್ನು, ಮರು ಮಾತಿಲ್ಲದೆ ಅವರು ಮಾಡಿದ್ದರು!!!.

ನನಗೆ ಕಿರಿಯ ವಿದ್ಯಾರ್ಥಿಗಳಿಗೆ ಭೋದಿಸಲು ಒಬ್ಬ ಶಿಕ್ಷಕರ ಅಗತ್ಯತೆ ಬಹಳ ಇತ್ತು. ಏಕೆಂದರೆ, ತರಗತಿಗಳನ್ನು ವಿಭಜಿಸಿದ್ದೆವು. ಊಟದ ವೇಳೆಯಲ್ಲಿ ನಾನು ಜಿಲ್ಲಾ ಶೈಕ್ಷಣಿಕ ಅಧಿಕಾರಿಗಳನ್ನು ಭೆಟ್ಟಿಯಾದೆ. ಅವರು ಇನ್ನೂ ನಮ್ಮ ಶಾಲೆಗೆ ಶಿಕ್ಷಕರನ್ನು ನಿಯೋಜಿಸಲು ಆಗುತ್ತಿಲ್ಲ ಎಂದು ಹೇಳಿದರು. ಅಲ್ಲದೇ ಇನ್ನೊಂದು ವಿಷಯ ತಿಳಿಸಿದರು; ಶಿಕ್ಷಕ ವೃಂದದಲ್ಲಿ ನಮ್ಮ ಶಾಲೆಯಲ್ಲಿ ಶಿಕ್ಷಕರಿಗೆ ಕೆಲಸದ ಹೊರೆ ಹೆಚ್ಚಿದೆ; ಆದ್ದರಿಂದಲೇ ಯಾವ ಶಿಕ್ಷಕರು ಬರಲು ಒಪ್ಪುತ್ತಿಲ್ಲವೆಂಬ ಸತ್ಯ ತಿಳಿಸಿದರು. ಆದರೆ ಅವರು ಹೇಳಿದ ಇನ್ನೊಂದು ವಿಚಾರ, ನನ್ನನ್ನು ತಬ್ಬಿಬ್ಬು ಮಾಡಿತು. ನಮ್ಮ ಶಾಲೆಯ ಶಿಕ್ಷಕರೋರ್ವರು ವರ್ಗಾವಣೆಗೆ ಕೋರಿಕೆ ಸಲ್ಲಿಸಿರುವ ವಿಷಯ ತಿಳಿಸಿದರು; ಅಲ್ಲದೆ ಈ ಬಗ್ಗೆ ನನ್ನ ಅಭಿಪ್ರಾಯ ಕೇಳಿದರು.

ನನಗೆ ಆಶ್ಚರ್ಯ ಮತ್ತು ನಿರಾಶೆ ಎರಡೂ ಆದವು. ಹಾಗೆಯೇ ನಾವು ಅಭಿವೃದ್ಧಿ ಯೋಜನೆ ಕಡೆಗೆ ನಡೆದಾಗ, ನಾನು ಸರ್ವಾಧಿಕಾರಿ ಧೋರಣೆಯಿಂದ ನಡೆಯುತ್ತಿದ್ದೇನೆ. ಎಂಬ ಅಂಶ ಗೊತ್ತಾಗುತ್ತಾ ಬಂದಿತು ನಾನು ಶಾಲೆಯಲ್ಲಿ ಹಲವಾರು ಬದಲಾವಣೆಗಳನ್ನು ತರಲು ನಿರ್ಧರಿಸಿ, ಅವುಗಳನ್ನು ಬಹುತೇಕ ಜಾರಿಗೆ ತರುವಲ್ಲಿ ಯಶಸ್ವಿಯಾಗಿದ್ದೇನೆ. ಆದರೆ ಅದಾವುವನ್ನೂ ಯಾವ ಶಿಕ್ಷಕರೊಂದಿಗೂ ಚರ್ಚಿಸಿಲ್ಲ ಮತ್ತು ಅವುಗಳ ಬಗ್ಗೆ ಅಭಿಪ್ರಾಯವನ್ನು ಸಂಗ್ರಹಿಸಿಲ್ಲ, ಎಂಬ ಅಂಶ ಮನದಟ್ಟು ಆಯಿತು. ಅವರ ಅನುಭವಕ್ಕೂ ನಾನು ಯಾವುದೇ ಬೆಲೆ ನೀಡಿಲ್ಲ ವೆಂಬ ಅರಿವು ಬಂತು. ಆದ್ದರಿಂದ ಕೆಲವರು

ಶಾಲೆ ಬಿಡುವ ಯೋಚನೆ ಮಾಡಿದ್ದಲ್ಲಿ ಯಾವ ಆಶ್ಚರ್ಯವೂ ಇಲ್ಲ.

ಆದ್ದರಿಂದ ಮಕ್ಕಳು ಶಾಲೆಗೆ ಬರುವುದನ್ನು ಇಷ್ಟಪಡುತ್ತಿದ್ದರೂ. ನಾನು ಶಿಕ್ಷಕರನ್ನು ಒಳ್ಳೇಯ ರೀತಿಯಲ್ಲಿ ಕಾಣುವ ಅವಶ್ಯಕತೆ ಇದೆ ಎಂಬುದು ಸ್ಪಷ್ಟವಾಯಿತು. ನಾನು ಶಾಲೆಗೆ ಹಿಂತಿರುಗಿದೆ. ಶಾಲೆಯಲ್ಲಿ ಹೆಚ್ಚು ಸ್ನೇಹಮಯಿಯಾಗಿರಲು ಮತ್ತು ಶಿಕ್ಷಕರಿಗೆ ಹೆಚ್ಚಿನ ಒತ್ತಾಸೆ ನೀಡಲು ನಿರ್ಧರಿಸಿದೆ. ಆದ್ದರಿಂದ ಮುಂದಿನ ಶಿಕ್ಷಕರ ಸಭೆಯಲ್ಲಿ ನಾನೇ ಮುಂದಾಗಿ ಆಡಳಿತಾತ್ಮಕ ವಿಷಯಗಳ ಚರ್ಚೆ ಆರಂಭಿಸದೆ, ಶಾಲೆಯಲ್ಲಿ ನಾವೇನು ಚೆನ್ನಾಗಿ ಮಾಡುತ್ತಿದ್ದೇವೆ, ಎಂದುಅವರೇ ಹೇಳಲು ಅನುವು ಮಾಡಿದೆ. 'ಈಗ ತರಗತಿಗಳಲ್ಲಿ ಬಾಲಕಿಯರು ಚೆನ್ನಾಗಿ ಭಾಗವಹಿಸುತ್ತಾರೆ; ಹಿರಿಯ ವಿದ್ಯಾರ್ಥಿಗಳು ಕಿರಿಯ ವಿದ್ಯಾರ್ಥಿಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ; ಮುಂತಾದ ಸಾಮಾಜಿಕ ಆಯಾಮಗಳ ಬಗ್ಗೆ ಮಾತನಾಡಿದರು. ಇದು ನನ್ನನ್ನು ಆಶ್ಚರ್ಯ ಭರಿತನನ್ನಾಗಿಸಿದವು. ನಾನು ಶಾಲೆಯಲ್ಲಿರುವ ಸಾಮಾಜಿಕ ಆಯಾಮಗಳ ಕುರಿತು ಯೋಚಿಸಿಯೇ ಇರಲಿಲ್ಲ.

ಆ ನಂತರ ನಾವು ಯಾವ ವಿಷಯಗಳಲ್ಲಿ ಸುಧಾರಣೆ ಅವಶ್ಯವಿದೆ ಎಂಬುದರ ಬಗ್ಗೆ ಚರ್ಚಿಸಿದೆವು ಆದರೆ ಇವರು ವಿಮರ್ಶಾತ್ಮಕವಾಗಿ ಹೇಳುವದಕ್ಕೆ ಹೆದರುತ್ತಿದ್ದರು ಎಂಬದು ನನಗೆ ಗೊತ್ತಾಯಿತು ಆದ್ದರಿಂದ ನಾನು ಶಿಕ್ಷಕರೇ (ನನ್ನ ಅನುಪಸ್ಥಿತಿಯಲ್ಲಿ) ಚರ್ಚೆಮಾಡಿ ಆದ್ಯತಾ ಯಾದಿಯನ್ನು ತರುವಂತೆ ಹೇಳಿದೆ ಮತ್ತು ಸ್ಪಷ್ಟವಾಗಿ ನನ್ನ ಕ್ರಮಗಳನ್ನು ಸಹ ವಿಮರ್ಶೆ ಮಾಡಿ ಎಂದು ವಿನಂತಿಸಿಕೊಂಡೆನು. ಆ ನಂತರದಲ್ಲಿ, ಪ್ರತಿಯೊಬ್ಬ ಶಿಕ್ಷಕರೊಟ್ಟಿಗೆ ವೈಯಕ್ತಿಕವಾಗಿ ಮಾತನಾಡಲು ಸಮಯ ನೀಡಿದೆ. ಇದರಿಂದ ಅವರ ಕೆಲಸದ ಬಗ್ಗೆ ಮತ್ತು ಅವರ ಆದ್ಯತೆಗಳ ಬಗ್ಗೆ ಅರಿಯಲು, ಹಾಗು ಅವರನ್ನು ಒಬ್ಬ ವ್ಯಕ್ತಿಯಾಗಿ ನೋಡಲು ಸಾಧ್ಯವಾಯಿತು.

ಸ್ವಲ್ಪ ಸಮಯದ ನಂತರ ನಮ್ಮಲ್ಲಿ ಸಂವಾದಗಳು, ಮಾತು ಕತೆಗಳು ಹೆಚ್ಚು ಅನೌಪಚಾರಿಕವಾಗಿ, ಹೆಚ್ಚು ಮುಕ್ತವಾಗಿ, ಪ್ರಾಮಾಣಿಕವಾಗಿ ನಡೆಯಲಾರಂಭಿಸಿದು. ನಾನು ಎಲ್ಲರೂ ಕೂಡಿ ಏನು ಮಾಡಬಹುದು ಎಂಬುದರ ಬಗ್ಗೆ ನನಗೆ ಹೆಚ್ಚು ಕಲಿಕೆಯಾಯಿತು ಸಣ್ಣ ಸಣ್ಣ ಬದಲಾವಣೆಗಳೊಂದಿಗೆ, ಶಾಲೆಯನ್ನು ಹೇಗೆ ಬದಲಾಯಿಸಬಹುದೆಂದು ಕಲಿತೆ.

**ಚಿಂತನೆಗಾಗಿ ವಿರಾಮ**

ಈ ಅಭ್ಯಾಸದ ಬಗ್ಗೆ ಪರ್ಯಾಲೋಚಿಸಿರಿ. ನಿಮಗೆ ನಿಮ್ಮ ಶಿಕ್ಷಕರು ನಿಮ್ಮ ಶಾಲೆಯಲ್ಲಿ ಕೆಲಸ ಮಾಡವುದನ್ನು ಇಷ್ಟಪಡುತ್ತಾರೆಂದು ಅನ್ನಿಸುತ್ತಿದೆಯೇ? ಅವರು ಗೌರವಿಸಲ್ಪಡುತ್ತಿದ್ದಾರೆಯೇ? ಅವರಿಗೆ ನೆರವು ಸಿಗುತ್ತಿದೆಯೇ? ಅವರಿಗೆ ಬೆಲೆ ಸಿಗುತ್ತಿದೆಯೇ?

# 6 ನಿಮ್ಮ ಶಿಕ್ಷಕರೆಡೆಗೆ ಗಮನ ನೀಡುವುದು



**ಚಿತ್ರ ಎರಡು –ನಿಮ್ಮ ಶಿಕ್ಷಕರು ವೃತ್ತಿಪರತೆಯನ್ನು ನಿಮ್ಮನ್ನು ಅನುಸರಿಸುವರು.**

ನಿಮ್ಮ ಕಲಿಕೆಯ ಬಗೆಗಿನ ನಿಮ್ಮ ಧೋರಣೆಯು, ನಿಮ್ಮ ಶಿಕ್ಷಕರು ಅವರ ವೃತ್ತಿಪರ ಬೆಳವಣಿಗೆ ಬಗ್ಗೆ ಹೊಂದಿರುವ ಧೋರಣೆಯ ಮೇಲೆ ನೇರವಾಗಿ ಪರಿಣಾಮ ಬೀರುತ್ತದೆ. ನಿಮ್ಮಲ್ಲಿನ ಬದಲಾವಣೆಗೆ ಇರುವ ತಯಾರಿ, ಹಾಗು ಕೌಶಲಗಳಲ್ಲಿ ಆಗಿರುವ ಬೆಳವಣಿಗೆ, ಅವರನ್ನು ಸಹ ಬದಲಾಗಲು, ಬೆಳೆಯಲು ಪ್ರೋತ್ಸಾಹಿಸುತ್ತದೆ. ನಿಮ್ಮ ಅತಿದೊಡ್ಡ ಸಂಪನ್ಮೂಲವೆಂದರೆ ನಿಮ್ಮ ಶಿಕ್ಷಕರು. ಆದ್ದರಿಂದ ಅವರಿಗೆ ಸಾಧ್ಯವಿರುವಷ್ಟು ಉತ್ತಮ ಶಿಕ್ಷಕರಾಗಿ ಹೊರ ಹೊಮ್ಮಲು, ನೀವು ಅವಶ್ಯಕ ಅವಕಾಶಗಳನ್ನು ಪೂರೈಸ ಬೇಕಾಗುತ್ತದೆ.

ನೀವು ಅವರೆಲ್ಲರೂ ನಿಮಗಿಂತ ಒಳ್ಳೇಯ ಶಿಕ್ಷಕರಾಗುವುದನ್ನು ಬಯಸಬೇಕು ಮತ್ತು ಆಶಿಸಬೇಕು. ಹಲವು ಶಾಲಾನಾಯಕರು ಅವರ ಶಿಕ್ಷರನ್ನು ಉತ್ತಮ ಶಿಕ್ಷಕರನ್ನಾಗಿಸಿದ ಬಗ್ಗೆ ಇರುವ ಕೆಲವು ವಿಡಿಯೋ ಮುದ್ರಣಗಳನ್ನು ನೀವು ನೋಡಬಯಸಬಹುದು.

ವಿಡಿಯೋ : ಶಾಲಾ ನಾಯಕತ್ವ – ಶಿಕ್ಷಕರನ್ನು ಮುನ್ನಡೆಸುವುದು



ವಿಡಿಯೋ : ಶಾಲಾ ನಾಯಕತ್ವ – ಕಲಿಕಾ ವಾತಾವರಣ



ವಿಡಿಯೋ : ಶಾಲಾ ನಾಯಕತ್ವ – ಕಲಿಸುವುದನ್ನು, ಕಲಿಯುವುದ್ನು ಮುನ್ನಡೆಸುವುದು.



ಟೆಸ್ –ಇಂಡಿಯಾದ ಶಿಕ್ಷಕರ ಅಭಿವೃದ್ಧಿ OER ಗಳು ನಿಮ್ಮ ಶಿಕ್ಷಕರನ್ನು ಹೊಸ ಮಾರ್ಗಗಳನ್ನು ಬಳಸುವಂತೆ ಮಾಡಲು , ಹೊಸ ಹೊಸ ವಿಚಾರಗಳನ್ನು ಭೋದನೆಯಲ್ಲಿ ಅಳವಡಿಸಿಕೊಳ್ಳುವಂತೆ ಮಾಡಲು, ನಿಮಗೆ ಸಹಾಯವಾಗುವ ಸಲಕರಣೆಗಳು. ಅವು ಶಿಕ್ಷಕರನ್ನು, ಒಬ್ಬ ಕಲಿಕಾರ್ಥಿಯ ಸ್ಥಾನದಲ್ಲಿರಿಸಿ, ಅವರು ತಮ್ಮ ಬೋಧನೆ –ಕಲಿಕೆಯ ವಿಷಯದಲ್ಲಿ, ಈ ಸಲಕರಣೆಗಳಲ್ಲಿ ಹೇಳಿರುವ ಜಂಟಿ, ಸಹಭಾಗಿತ್ವದಲ್ಲಿ ಪ್ರಾಯೋಗಿಕ ಚಟುವಟಿಕೆಗಳ ಮೂಲಕ ಕಲಿಯುವಂತೆ ಪ್ರೇರೇಪಿಸುತ್ತವೆ.

ಶಿಕ್ಷಕನಾಗುವುದು ಒಂದು ಸಂಕೀರ್ಣಕ್ರಿಯೆಯಾದರೆ, ಶಿಕ್ಷಕನಾಗಿ ಉಳಿಯುವುದು ಒಂದು ಜೀವನಾದ್ಯಂತ ಕಲಿಕೆಯ ಪ್ರಕ್ರಿಯೆಯಾಗಿದೆ. ಶಿಕ್ಷಕರ ಕಲಿಕೆ ಹಾಗು ಅಭಿವೃದ್ಧಿ ಪರಿಕಲ್ಪನೆ ಹೊಂದಿರುವ ಬಹಳಷ್ಟು ಚೌಕಟ್ಟುಗಳನ್ನು ಸೂಚಿಸಿದ್ದರೂ ಅದರಲ್ಲಿ ಬಹಳ ಉಪಯೋಗಿಯಾಗುವ ಚೌಕಟ್ಟು –ಒಬ್ಬ ಶಿಕ್ಷಕರಲ್ಲಿ ಇರುವ ಆರು ಕ್ಷೇತ್ರಗಳನ್ನು ಗುರುತಿಸಿದೆ. (ಶುಲ್ಮನ್ ಮತ್ತು ಶುಲ್ಮನ್ ,2007)

- ಕಾಣ್ಕೆ
- ಅಭ್ಯಾಸ
- ಪ್ರೇರಣೆ
- ಪರ್ಯಾಲೋಚನೆ
- ತಿಳುವಳಿಕೆ
- ಸಮುದಾಯ

ತಖ್ತೆ 2ರಲ್ಲಿ ಅವುಗಳನ್ನು ವಿಸ್ತರಿಸಿದೆ.

**ತಖ್ತೆ 2 ಒಬ್ಬ ಸಾಧಕ ಶಿಕ್ಷಕರ ಲಕ್ಷಣಗಳ ಬಗ್ಗೆ ಅಭಿಪ್ರಾಯಗಳು**

| ಲಕ್ಷಣಗಳು | ಅಭಿಪ್ರಾಯ |
|---|---|
| ದರ್ಶನ, ಕಾಣ್ಕೆ | ಉತ್ತಮ ಶಿಕ್ಷಕರು ತಾವೇನು ಸಾಧಿಸ ಬೇಕೆಂದು ಪ್ರಯತ್ನಿಸುತ್ತಾರೋ ಆ ಬಗ್ಗೆ ಸ್ಪಷ್ಟ ಕಾಣ್ಕೆಯನ್ನು ಹೊಂದಿರಬೇಕು. ಅವು ವಿದ್ಯಾರ್ಥಿಗಳು, ಜ್ಞಾನ ಹಾಗು ಕಲಿಕೆಯ ಬಗ್ಗೆ ಅವರಲ್ಲಿರುವ ನಂಬಿಕೆಗಳ ಆಧಾರದಲ್ಲಿ ಇರುತ್ತವೆ. ಅವರು ತಮ್ಮ ಅನುಭವದ ಹಿನ್ನಲೆಯಲ್ಲಿ ಆಳವಾಗಿ ಪರ್ಯಾಲೋಚಿಸಿ, ಕಾಣ್ಕೆಯನ್ನು ಅಳವಳಡಿಸಿಕೊಳ್ಳಬೇಕು. |
| ಪ್ರೇರಣೆ | ಉತ್ತಮ ಶಿಕ್ಷಕರು ಸುಧಾರಣೆಯಾಗಲು ಹಾಗು ಅಭಿವೃದ್ಧಿ ಹೊಂದಲು ಸದಾ ಪ್ರೇರಿತರಾಗಿರಬೇಕು. |
| ತಿಳುವಳಿಕೆ | ಉತ್ತಮ ಶಿಕ್ಷಕರಿಗೆ ಏನು ಮಾಡುವುದು ಮತ್ತು ಹೇಗೆ ಮಾಡುವುದು, ಎರಡರ ಬಗ್ಗೆಯೂ ತಿಳಿದಿರಬೇಕು. ತಾವು ಕಲಿಸಬೇಕಾದ ವಿಷಯದ ಬಗ್ಗೆ ಜ್ಞಾನ ಹಾಗು ಅದನ್ನು ಕೊಟ್ಟಿರುವ ಸಂದರ್ಭದಲ್ಲಿ ಪರಿಣಾಮಕಾರಿಯಾಗಿ ಹೇಗೆ ಭೋದಿಸಬೇಕೆಂಬುದನ್ನು ತಿಳಿದಿರಬೇಕು. |
| ಅಭ್ಯಾಸ | ಉತ್ತಮ ಶಿಕ್ಷಕರು ಅಭ್ಯಾಸವು ಒಂದು ಸಂಕೀರ್ಣಕ್ರಿಯಾಗಿದ್ದು. ಕಾಲಕ್ರಮೇಣ ಅಭಿವೃದ್ಧಿ ಹೊಂದುತ್ತದೆ. ಎಂಬುದನ್ನು ತಿಳಿದಿರುತ್ತಾರೆ. ಅವರು ತಾವು ತರಗತಿಯನ್ನು ಕಲಿತಿರುವ ಸಿದ್ಧಾಂತಗಳನ್ನು ಹೇಗೆ ಆಚರಣೆಗೆ ತರಬಹುದೆಂಬುದನ್ನು ತಿಳಿದಿರುತ್ತಾರೆ. ಉತ್ತಮ ಶಿಕ್ಷಕರು ಬೇರೆ ಬೇರೆ ಮಾರ್ಗೋಪಾಯಗಳನ್ನು ಬಳಸುವುದನ್ನು ಅನುಭವ ಮುಖೇನ ಕಲಿಯುತ್ತಾರೆ. |

| | |
|---|---|
| ಪರ್ಯಾಲೋಚನೆ | ಉತ್ತಮ ಶಿಕ್ಷಕರು ಯಾವಾಗಲೂ ತಾವೇನು ಮಾಡುತ್ತಿದ್ದೇವೆ. ಎಂಬುದರ ಬಗ್ಗೆ ಪರ್ಯಾಲೋಚನೆಯಲ್ಲಿರುತ್ತಾರೆ. ಮತ್ತು ಅನುಭಗಳಿಂದ ಕಲಿಯುತ್ತಾರೆ. ಪರ್ಯಾಲೋಚನೆ ಇಲ್ಲದೆ ಇದ್ದರೆ ಶಿಕ್ಷಕರು ಬದಲಾವಣೆಯ ಶಕ್ತಿಯನ್ನು ಹೊಂದುವುದಿಲ್ಲ. |
| ಸಮುದಾಯ | ಉತ್ತಮ ಶಿಕ್ಷಕರು ಅವರು ಸಮುದಾಯ ಒಂದು ಭಾಗವೆಂಬುದನ್ನು ಅರಿಯುತ್ತಾರೆ ಹಾಗು ಆ ಸಮುದಾಯವು ತಾವು ಹೊಂದಿರುವ ಉದ್ದೇಶ ಹಾಗು ಮೌಲ್ಯಗಳನ್ನು ಹಂಚಿಕೊಳ್ಳಬಲ್ಲದು. ಅವರು ಸಮುದಾಯ ದಿಂದ ನೆರವನ್ನು ಪಡೆಯಲು, ಹಾಗು ಸಮುದಾಯಕ್ಕೆ ನೆರವು ನೀಡಲು ಆಶಿಸುತ್ತಾರೆ. |



**ಚಿಂತನೆಗಾಗಿ ವಿರಾಮ**

- ಈ ಮೇಲೆ ಚರ್ಚಿಸಿದ ಲಕ್ಷಣಗಳು, ನಿಮ್ಮ ಶಾಲೆಯ ಶಿಕ್ಷಕರಿಗೆ ಎಷ್ಟರ ಮಟ್ಟಿಗೆ ಅನ್ವಯಿಸುತ್ತದೆ?
- ನಿಮ್ಮ ಶಾಲೆಯ ಎಷ್ಟು ಜನ ಶಿಕ್ಷಕರನ್ನು, ನೀವು ಉತ್ತಮ ಶಿಕ್ಷಕರೆಂದು ಭಾವಿಸುತ್ತೀರಿ?
- ನಿಮ್ಮ ಸಿಬ್ಬಂದಿಯನ್ನು ಒಟ್ಟಿಗೆ ನೋಡಿದಾಗ, ಯಾವ ಕ್ಷೇತ್ರಗಳಲ್ಲಿ ಹೆಚ್ಚಿನ ಬೆಳವಣಿಗೆ ಅವಶ್ಯಕವೆಂದು ಭಾವಿಸುತ್ತೀರಿ?

ನಮ್ಮ ಓ.ಇ.ಆರ್, ಇವೆಲ್ಲ ಕ್ಷೇತ್ರಗಳಲ್ಲಿ, ಶಿಕ್ಷಕರ ಕಲಿಕೆಗೆ ನೆರವು ನೀಡುತ್ತದೆ. ಈ ಓ.ಇ.ಆರ್‌ಗಳು ಪ್ರಸ್ತುತ ಇರುವ ಊಹೆಗಳನ್ನು, ಸವಾಲು ಮಾಡುತ್ತವೆ. ಹಾಗು ಶಿಕ್ಷಕರಿಗೆ ಹೊಸ ಮಾರ್ಗದಲ್ಲಿ ಪ್ರಯತ್ನಿಸಲು ಪ್ರೇರಪಿಸುತ್ತವೆ. ಶಾಲಾ ನಾಯಕರಾಗಿ, ನೀವು ಶಿಕ್ಷಕರಿಗೆ ಈ ಮಾರ್ಗದಲ್ಲಿ ನಡೆಸಲು ಪ್ರೋತ್ಸಾಹ, ಮತ್ತು ಕೂಡಿ ಕೆಲಸ ಮಾಡಲು ಅವಕಾಶಗಳನ್ನು ಸೃಷ್ಟಿಸಲು, ಸಾಧ್ಯವಾಗುವ ಸ್ಥಿತಿಯಲ್ಲಿ ಇರುವಿರಿ.

ಈ ವಿಡಿಯೋ ತುಣಕುಣಗಳು ಹಿಂದಿ ಭಾಷಿ ತರಗತಿಗಳಲ್ಲಿ ಚಿತ್ರೀಕರಿಸಿದ್ದು ಅವನ್ನು ಬೇರೆ ಬೇರೆ ರಾಜ್ಯ ಭಾಷೆಗಳ ತರ್ಜಮೆ ಮಾಡಲಾಗಿದೆ.

ಈ ವಿಡಿಯೋ ತುಣಕಗಳ ಕೊಂಡಿಯನ್ನು ಓ.ಇ.ಆರ್ ಸಂದರ್ಭಕನುಸಾರ ನೀಡಲಾಗಿದೆ. ವೀಡಿಯೋಗಳ ಮೂಲಕ ತೋರಿಸಲಾಗಿದೆ. ಹಾಗು ಕಂಪ್ಯೂಟರ್ ಮುಖೇನ ನೇರವಾಗಿ ದೊರಕುತ್ತವೆ.

ಈ ವಿಡಿಯೋ ತುಣುಕುಗಳನ್ನು ಟ್ಯಾಬ್ಲೆಟ್ , ಡಿ.ವಿ.ಡಿ ಅಥವಾ ಮೊಬೈಲ್ ದೂರವಾಣಿಗಳಲ್ಲಿ ನಕಲು ಮಾಡಿಕೊಳ್ಳಬಹುದು

ಶಿಕ್ಷಕ ಅಭಿವೃದ್ಧಿ ಓ.ಇ.ಆರ್ (ನಿಮ್ಮ ಶಿಕ್ಷಕರಿಗಾಗಿ)

4ವಿಷಯಗಳಿಗೆ ಸಂಬಂಧಿಸಿದಂತೆ 60 ಓ.ಇ.ಆರ್ ಗಳಿವೆ ಭಾಷಾಕಲಿಕೆಗೆ ಮತ್ತು ಬರವಣಿಗೆಗೆ ಸಂಬಂಧಿಸಿದಂತೆ 15 ವಿಜ್ಞಾನ , ಕಲಿಕೆಗೆ 15 , ಇಂಗ್ಲೀಷ್ ಕಲಿಕೆಗೆ 15 ಹಾಗು ಗಣಿತ ಕಲಿಕೆಗೆ 15. ಈ ಓ.ಇ.ಆರ್‌ಗಳು ಶಿಕ್ಷಕರಿಗೆ ಮತ್ತು ಶಿಕ್ಷಕರ ಶಿಕ್ಷಕರಿಗೆ ರಚಿಸಲಾಗಿದ್ದು , ಶಿಕ್ಷಕರಿಗೆ ತಮ್ಮ ತರಗತಿಗಳಲ್ಲಿ ಪ್ರಾಯೋಗಿಕ ವಿಚಾರಗಳನ್ನು ಅಳವಡಿಸಿಕೊಳ್ಳಲು ನೆರವಾಗುತ್ತವೆ.

# 7 ಸಾರಾಂಶ

ಶಿಕ್ಷಣರಂಗದಲ್ಲಿ ಈತ್ತೀಚಿನ ದಿನಗಳಲ್ಲಿ ಆಗುತ್ತಿರುವ ಬದಲಾವಣೆಗಳು, ಶಾಲಾನಾಯಕರ ಮೇಲೆ ಹೆಚ್ಚಿನ ಜವಾಬ್ದಾರಿಗಳನ್ನು ಹಾಕಿವೆ. ಆದರೆ ಅವು ನಿಮಗೆ ನಿಮ್ಮ ಶಾಲೆಯಲ್ಲಿ ನಿಜವಾದ ವ್ಯತ್ಯಾಸಗಳನ್ನು ತರುವ ಮೂಲಕ ವಿಧ್ಯಾರ್ಥಿಗಳ ಕಲಿಕಾ ಫಲಿತಾಂಶಗಳ ಮೇಲೆ ಪರಿಣಾಮಕಾರಿ ಬದಲಾವಣೆ ತರಲು ಅವಕಾಶಗಳನ್ನೂ ತೆರೆದಿವೆ. ನೀವೀಗ ಒಂದು ಬದಲಾಗುತ್ತಿರುವ ವೃತ್ತಿರಂಗದ ಭಾಗವಾಗಿದ್ದೀರಿ. ಆದು ನಿಮ್ಮ ಶಾಲೆಯನ್ನು ಪರಿವರ್ತಿಸಲು ಬೇಕಾದ ಗುಣಗಳನ್ನು ಹಾಗು ಸಾಮರ್ಥ್ಯಗಳನ್ನು ತೋರಿಸಲು ಕೋರಿವೆ. ಟೆಸ್–ಇಂಡಿಯಾದವರ ಶಾಲಾ ನಾಯಕತ್ವ ಓ.ಇ.ರ್.ಗಳುನಿಮಗೆ ಈ ಸವಾಲುಗಳನ್ನು, (ವಿಶೇಷವಾಗಿ ನಿಮ್ಮ ಶಿಕ್ಷಕರಿಗೆ ವಿಭಿನ್ನ ರೀತಿಯಲ್ಲಿ ಕೆಲಸ ಮಾಡುವಂತೆ ಮನವೊಲಿಸುವುದು ಮತ್ತು ರಾಷ್ಟ್ರೀಯ ಶಿಕ್ಷಣ ನೀತಿಗಣುವಾಗಿ ಹೊಸ ಮಾರ್ಗೋಪಾಯ ಗಳನ್ನು ಅಳವಡಿಸಿಕೊಳ್ಳಲು) ಎದುರಿಸಲು ಸಹಾಯ ಮಾಡುತ್ತವೆ.

ಈ ಘಟಕವು ನಿಮಗೆ ನೀವೊಬ್ಬ ಸಕ್ರಿಯ ಕಲಿಕಾರ್ಥಿಯಾಗುವ ಮಹತ್ವವನ್ನು ತಿಳಿಸುತ್ತಾ ನಿಮ್ಮ ಜ್ಞಾನ ಮತ್ತು ಕೌಶಲಗಳಲ್ಲಿರಬಹುದಾದ ಕೊರತೆಗಳನ್ನು ನೀಗಿಸಿಕೊಳ್ಳಲು ಪರಿಹಾರ ನೀಡುವ ನಿಟ್ಟಿನಲ್ಲಿ ಗಮನ ಹರಿಸಿದೆ. ನೀವು ಈ ಘಟಕದೊಂದಿಗೆ ಕೆಲಸ ಮಾಡುತ್ತ ಹೋದಂತೆ,ನೀವು ಟೆಸ್‌ನ ಶಾಲಾ ನಾಯಕತ್ವದ ಓ.ಇ.ರ್ ಬಳಸಿಕೊಂಡು, ನಿಮ್ಮದೇ ಒಂದು ಕಲಿಕಾ ಯೋಜನೆ ಮತ್ತು ನಕ್ಷೆಯನ್ನು ಮಾಡಿಕೊಳ್ಳುತ್ತೀರಿ. ಹಾಗು ಅವಶ್ಯ ಬಿದ್ಧಂತೆ, ನಿಮ್ಮ ಸಹೋದ್ಯೋಗಿಗಳೊಂದಿಗೆ ಹಂಚಿಕೊಂಡು, ನಿಮ್ಮ ಕಲಿಕೆ ಯೋಜನೆಯ ನಿರ್ವಹಣೆ ಮತ್ತು ಮೇಲವಿಚಾರಣೆ ಮಾಡಿಕೊಳ್ಳಬೇಕಾಗುವುದು.

# ಸಂಪನ್ಮೂಲಗಳು

## ಸಂಪನ್ಮೂಲ 1 Tess –India ಸಂಪನ್ಮೂಲಗಳ ಸಾರಾಂಶ

ಶಾಲಾ ನಾಯಕತ್ವದ ಒ.ಇ.ಆರ್‌ಗಳು(ನಿಮಗಾಗಿ)

ಇದರಲ್ಲಿ 20 ಒ.ಇ.ಆರ್‌ಗಳನ್ನು (ಶಾಲಾ ನಾಯಕರಿಗಾಗಿ ಅಂದರೆ, ಮುಖ್ಯ ಗುರುಗಳು, ಪ್ರಾಚಾರ್ಯರು, ಅವರ ಸಹಾಯಕರು ಮತ್ತು ಆ ಪಾತ್ರವನ್ನು ವಹಿಸುತ್ತಿರುವ ಇತರರಿಗಾಗಿ) ವಿನ್ಯಾಸಗೊಳಿಸಲಾಗಿದೆ. ಈ ಒ.ಇ.ಆರ್‌ಗಳು ಶಾಲಾ ನಾಯಕರಿಗೆ, ಶಾಲೆಯಲ್ಲಿ ಬದಲಾವಣೆಗೆ ಹಾಗು ಸುಧಾರಣೆಗೆ ಬೇಕಾದ ಎಲ್ಲ ವ್ಯವಸ್ಥೆಗಳು ಹಾಗು ಪ್ರಕ್ರಿಯೆಗಳನ್ನು ಮಾಡಲು ತಮ್ಮ ನಾಯಕತ್ವದ ವಿವಿಧ ಪಾತ್ರಗಳನ್ನು ನಿರ್ವಹಿಸಲು ಬೇಕಾದ ನೆರವನ್ನು ನೀಡುತ್ತದೆ. ಇದಲ್ಲದೇ ಅವು ನಾಯಕರಿಗೆ ಶಾಲೆಯಲ್ಲಿ ನಡೆಯುವ ಭೋದನೆ ಹಾಗು ಕಲಿಕೆಯಲ್ಲಿ ನಿಜವಾದ ಬದಲಾವಣೆಗಾಗಿ ಕೆಲಸ ಮಾಡಲು ಬೇಕಾದ ಜ್ಞಾನ ಮತ್ತು ಕೌಶಲಗಳನ್ನು ಬೆಳೆಸಿಕೊಳ್ಳಲು ನೆರವಾಗುತ್ತವೆ. ಅಲ್ಲದೆ ಶಾಲೆಗಳು ಕೂಡಿಕಲಿಯುವ ಪರಿಣಾಮಕಾರಿ ಕಲಿಕೆಯ ಸುತ್ತ ಗಮನವಹಿಸುವಿಕೆ ನಾಯಕತ್ವ ನೀಡಲು ನಿಮಗೆ ಸಹಾಯವಾಗುತ್ತದೆ. ಈ ಒ.ಇ.ಆರ್‌ಗಳು ಸಂಪನ್ಮೂಲ–3 ರಲ್ಲಿ ಪಟ್ಟಿಮಾಡಲಾಗಿದೆ.

**ಅತ್ಯವಶ್ಯಕ ಸಂಪನ್ಮೂಲಗಳು:**

ಟೆಸ್–ಇಂಡಿಯಾ ಒ.ಇ.ಆರ್‌ಗಳು 10 ಅತ್ಯವಶ್ಯಕ ಸಂಪನ್ಮೂಲಗಳ ಒಂದು ಗುಂಪನ್ನು ಹೊಂದಿದೆ; ಈ ಸಂಪನ್ಮೂಲ ಗುಂಪು ಎಲ್ಲ ವಿಷಯಗಳು ಹಾಗು ಹಂತಗಳಿಗೆ ಹೊಂದುತ್ತದೆ. ಹಾಗು ನಿಮಗೆ ಮತ್ತು ನಿಮ್ಮ ಶಿಕ್ಷಕರಿಗೆ ಮುಂದುವರಿದ ಪ್ರಾಯೋಗಿಕ ಮಾರ್ಗದರ್ಶನವನ್ನು ಎಲ್ಲ ರೀತಿಯ ಪ್ರಮುಖ ಪ್ರಯೋಗಗಳನ್ನು – ಟೆಸ್ –ಇಂಡಿಯಾದ ಅಧ್ಯಾಪನ ಶಾಸ್ತ್ರದ–ಒ.ಇ.ಆರ್‌ಗಳ ಮಾರ್ಗದರ್ಶನ ನೀಡುತ್ತವೆ. ಅವು ವಿದ್ಯಾರ್ಥಿಗಳನ್ನು ಸಂಘಟಿಸುವುದು, ಕಲಿಕೆಯ ಚಟುವಟಿಕೆಗಳು, ಶಾಲಾ ಶಿಕ್ಷಕ ಹಾಗು ವಿದ್ಯಾರ್ಥಿಗಳು, ಹಾಗು ವಿದ್ಯಾರ್ಥಿ – ವಿದ್ಯಾರ್ಥಿ ನಡುವೆ ಅಂತರಗಳನ್ನು ಒಳಗೊಂಡಿರುತ್ತವೆ. ಈ ಎಲ್ಲ ಪ್ರಮುಖ ಸಂಪನ್ಮೂಲಗಳನ್ನು ಒ.ಇ.ಆರ್‌ಗಳಲ್ಲಿ ಸೇರಿಸಲ್ಪಟ್ಟವೆ (ಎಲ್ಲೆಲ್ಲಿ ಸಮರ್ಪಕವೊ ಅಲ್ಲಲ್ಲಿ) ಅಲ್ಲದೇ ಪ್ರತ್ಯೇಕ ದಾಖಲಾತಿಗಳಾಗಿ ದೊರೆಯುತ್ತವೆ. ಕೇವಲ ಶಿಕ್ಷಕರ–ಶಿಕ್ಷಣ ವೇತ್ತರಿಗಾಗಿ, ಹಾಗು ಶಾಲಾ ನಾಯಕರಿಗೆ ತರಬೇತಿಗಳಲ್ಲಿ ಮತ್ತು ಇತರೇ ಸಂದರ್ಭಗಳಲ್ಲಿ ದೊರಕಿಸಲಾಗುತ್ತದೆ.

**ಶೃವ್ಯ–ದೃಶ್ಯ ಸಾಮಗ್ರಿಗಳು:** ಅತ್ಯವಶ್ಯಕ ಸಂಪನ್ಮೂಲಗಳ ವಿಷಯಗಳಿಗೆ ಹೊಂದುವಂತ ವಿಡಿಯೋ ತುಣುಕುಗಳ ಒಂದು ಗುಂಪು ಇವು ತರಗತಿಗಳಲ್ಲಿ ಮೂಲ ಸಹಭಾಗಿತ್ವದ ತಂತ್ರಗಳನ್ನು ನಿದರ್ಶಿಸುವ ದೃಶ್ಯಗಳನ್ನು ಹೊಂದಿವೆ. ಈ ತುಣುಕುಗಳು ಭಾರತದ ತರಗತಿಗಳಲ್ಲಿ ಸಹಭಾಗಿತ್ವ ಕಲಿಕೆಯ ಚಿತ್ರೀಕರಣಮಾಡಿ ತೋರಿಸುತ್ತವೆಯಲ್ಲದೆ. ವೀಕ್ಷಕರಿಗೆ ಅವುಗಳನ್ನು ಯಾವ ಅಂಶಗಳೆಡೆ ಲಕ್ಷ್ಯ ನೀಡಬೇಕೆಂಬದರ ಬಗ್ಗೆ ವಿವರಣೆ ಹಾಗು ಗಮನ ಸೆಳೆಯುವಂತೆ ಚಿತ್ರೀಕರಣ ಮಾಡಲಾಗಿದೆ.

ಈ ವಿಡಿಯೋ ತುಣುಕುಗಳು ಹಿಂದಿ ಭಾಷಿಕ ತರಗತಿಗಳಲ್ಲಿ ಚಿತ್ರೀಕರಿಸಿದ್ದು, ಅವನ್ನು ಬೇರೆ ಬೇರೆ ರಾಜ್ಯ ಭಾಷೆಗಳಿಗೆ ತರ್ಜುಮೆ ಮಾಡಲಾಗಿದೆ. ಈ ವಿಡಿಯೋ ತುಣಕಗಳ ಕೊಂಡಿಯನ್ನು ಒ.ಇ.ಆರ್‌ಗಳಲ್ಲಿ ಸಂದರ್ಭಕ್ಕನುಸಾರ ನೀಡಲಾಗಿದೆ. ವಿಡಿಯೋಗಳ ಮೂಲಕ ತೋರಿಸಲಾಗಿದೆ. ಹಾಗು ಕಂಪ್ಯೂಟರ್ ಮುಖೇನ ನೇರವಾಗಿ ದೊರಕುತ್ತದೆ.

ಈ ವಿಡಿಯೋ ತುಣುಕುಗಳನ್ನು ಟ್ಯಾಬ್ಲೆಟ್ , ಡಿ.ವಿ.ಡಿ ಅಥವಾ ಮೊಬೈಲ್ ದೂರವಾಣಿಗಳಲ್ಲಿ ಅಥವಾ ಎಸ್.ಡಿ.ಕಾರ್ಡ್‌ಲ್ಲಿ ನಕಲು ಮಾಡಿಕೊಳ್ಳಬಹುದು

**ಶಿಕ್ಷಕ ಅಭಿವೃದ್ಧಿ ಒ.ಇ.ಆರ್ ಗಳು (ನಿಮ್ಮ ಶಿಕ್ಷಕರಿಗಾಗಿ)**

4 ವಿಷಯಗಳಿಗೆ ಸಂಬಂಧಿಸಿದಂತೆ 60 ಒ.ಇ.ಆರ್‌ಗಳಿವೆ. ಭಾಷಾಕಲಿಕೆಗೆ ಮತ್ತು ಬರವಣಿಗೆ ಕಲಿಕೆಗೆ 15, ವಿಜ್ಞಾನ ಕಲಿಕೆಗೆ 15, ಇಂಗ್ಲೀಷ ಕಲಿಕೆಗೆ 15. ಹಾಗು ಗಣಿತ ಕಲಿಕೆಗೆ 15. ಈ ಒ.ಇ.ಆರ್‌ಗಳು ಶಿಕ್ಷಕರಿಗೆ ಮತ್ತು ಶಿಕ್ಷಕರ–ಶಿಕ್ಷಕರಿಗೆ ರಚಿಸಿಲಾಗಿದ್ದು, ಶಿಕ್ಷಕರಿಗೆ ತಮ್ಮ ತರಗತಿಗಳಲ್ಲಿ ಪ್ರಾಯೋಗಿಕ ವಿಚಾರಗಳನ್ನು ಅಳವಡಿಸಿಕೊಳ್ಳಲು ನೆರವಾಗುತ್ತವೆ.

**ಸಂಪನ್ಮೂಲ –2 ನಾಯಕತ್ವ ಸಾಮರ್ಥ್ಯಗಳ ಸೂಕ್ಷ್ಮ ಪರೀಕ್ಷೆ (ಯಾವ ದಾದರೊಂದಕ್ಕೆ (✓) ಗುರುತು ಹಾಕಿ)**

***Table R2.1*** *Leadership competencies audit (adapted from MacBeath and Myers, 1999)*

| ನಾಯಕತ್ವದ ಸಾಮರ್ಥ್ಯಗಳು | | ನಿಮ್ಮನ್ನು ನೀವು ಹೇಗೆ ಅಳೆದುಕೊಳ್ಳುವಿರಿ | | | ಇದನ್ನು ಇತ್ತೀಚಿಗೆ ಬಳಸಿದ ಸಂದರ್ಭ ವಿವರಣೆ |
|---|---|---|---|---|---|
| | | ಹೆಚ್ಚು ಸಮರ್ಥ | ತಕ್ಕಷ್ಟು ಸಮರ್ಥ | ಅಲ್ಲ ಸಮರ್ಥ | |
| ಬೇರೆಯವರೊಡನೆ ಕೂಡಿ ಕಾರ್ಯ | ಇತರರಿಗೆ ನೆರವು | | | | |
| | ವೈಯಕ್ತಿಕ ಸಾಧನೆಯನ್ನು ಗುರುತಿಸುವುದು | | | | |
| | ಬೇರೆಯವರ ಆತ್ಮ ಗೌರವವನ್ನು ಬೆಳೆಸುವುದು | | | | |
| | ಬೇರೆಯವರು ಬೆಳೆಯಲು ಸಹಾಯವಾಗುವ ಂತಹ ಅವಕಾಶ ಸೃಷ್ಠಿಮಾಡಿ ಅವರಲ್ಲಿ ಪರ್ಯಾಲೋಚ ನಾ ಶಕ್ತಿ ಬೆಳಸುವುದು. | | | | |
| | ದುಗುಡ ನಿವಾರಣೆ | | | | |
| ತಾದಾತ್ಮಾ ಭಾವದಿಂದ ಕೇಳುವುದು ಮತ್ತು ಪರ್ಯಾಲೋಚನೆ ಮಾಡುವವರು | ತೀರ್ಮಾನಕ್ಕೆ ಮುನ್ನ ಪೂರ್ಣವಾಗಿ ವಿಷಯವನ್ನು ಗ್ರಹಿಸುವುದು | | | | |
| | ವೈಯಕ್ತಿಕ ವಿಚಾರಗಳನ್ನು, ಸಮಸ್ಯೆಗಳನ್ನು ಆಲಿಸುವುದು | | | | |
| | ಹಿಮ್ಮಾಹಿತಿ ಪಡೆಯಲು ತವಕ | | | | |
| ಇತರರನ್ನು ಸಶಕ್ತಗೊಳಿಸವುದು | ಬೇರೆಯವರು ನಿರ್ಣಯ ತೆಗೆದುಕೊಳ್ಳಲು ಅವಕಾಶಮಾಡಿ ಅದರ ಹೊಣೆ ಹೊರವುದು | | | | |
| ನಡುವಳಿಕೆಗಳಿಂದ ಮಾದರಿ ಆಗುವುದು | ವೈಯಕ್ತಿಕ ಸಂಬದ್ಧತೆಯನ್ನು ಪ್ರದರ್ಶಿಸುವುದು | | | | |
| | ಬೆಂಬಲಿಸಬೇಕಾದ ಮೌಲ್ಯಗಳ,ಮನೆ ೋಧೊರಣೆಗಳ ಮಾದರಿ | | | | |

| | | | | | |
|---|---|---|---|---|---|
| | ಯಾಗಿರುವುದು | | | | |
| | ಉತ್ಸುಕತೆ ತೋರುವುದು | | | | |
| ನಿರ್ಧಾರ ತೆಗೆದುಕೊಳ್ಳುವಿಕೆಗೆ ಸ್ಥಿತಿ ನಿರ್ಮಾಣ ಮಾಡುವುದು | ಸ್ಪಷ್ಟ ಕಾಣ್ಕೆ ಮತ್ತು ನಿರ್ದೇಶನ ನೀಡುವುದು | | | | |
| | ತೀರ್ಮಾನ ತೆಗೆದುಕೊಳ್ಳುವುದ ು | | | | |
| | ಅತ್ಯವಶ್ಯಕ ವಿವಾದಾತ್ಮಕ ವಿಷಯಗಳನ್ನು ಬಗ್ಗೆ ಅರಿವು ಮೂಡಿಸುವುದು | | | | |
| ಬದಲಾವಣೆಯಾದ ಪರಿಸ್ಥಿತಿ ನಿರ್ವಹಣೆ | ಹೊಸ ರೀತಿಯಲ್ಲಿ ಕೆಲಸ ಮಾಡುವುದನ್ನು ಪ್ರೋತ್ಸಾಹಿಸುವು ದು | | | | |
| | ಭವಿಷ್ಯದ ಸವಾಲುಗಳ ಸಾಧ್ಯತೆಯನ್ನು ಮುಂಗಾಣುವುದು | | | | |
| | ತಪ್ಪುಗಳನ್ನು ಕಲಿಕೆಯ ಅವಕಾಶಗಳೆಂದು ಪರಿಗಣಿಸುವುದು | | | | |
| ತಂಡ ಕಾರ್ಯಗಳನ್ನು ಪ್ರೋತ್ಸಾಹಿಸುವುದು | ಎಲ್ಲರನ್ನೂ ಸೇರಿಸಿಕೊಂಡು ತಂಡಕಾರ್ಯ ಮಾಡಲು ಉತ್ತೇಜನ ಹಾಗು ಪ್ರೋತ್ಸಾಹನ ನೀಡುವುದು | | | | |

**ಸಂಪನ್ಮೂಲ –3 ಶಾಲಾ ನಾಯಕತ್ವ ಕಲಿಕಾ ಫಲಿತಾಂಶಗಳು**

***Table R3.1*** *Learning outcomes of the TESS-India School Leadership OERs.*

| **ಎನ್.ಸಿ.ಎಸ್.ಎಲ್ ಅತ್ಯಾವಶ್ಯಕ ಕ್ಷೇತ್ರಗಳು** | **ಒ.ಇ.ಆರ್ ತಲೆ ಬರಹ** | **ಕಲಿಕಾ ಫಲಿತಾಂಶಗಲು** |
|---|---|---|

| | | |
|---|---|---|
| ನೆಲೆಯರಿವು/ ಪರಿಚಯ | ಪ್ರಾಥಮಿಕ ಶಾಲೆಯ ನಾಯಕರು ಸಾಧ್ಯಕರ್ತರಾಗುವುದು | • ನಿಮ್ಮ ಶಾಲಾ ಕೌಶಲಗಳ ಪುನಾರವಲೋಕನ ಮಾಡಿಕೊಂಡು ಸುಧಾರಣೆಯ ಕ್ಷೇತ್ರಗಳನ್ನು ಗುರ್ತಿಸಿಕೊಳ್ಳುವುದು<br>• ಟೆಸ್–ಇಂಡಿಯಾದ ಒ.ಇ.ಆರ್‌ಗಳನ್ನು ಬಳಸಿಕೊಂಡು ನಿಮ್ಮ ಕಲಿಕಾ ಮಾರ್ಗವನ್ನು ವಿನ್ಯಾಸಗೊಳಿಸುವುದು. ಆ ಮೂಲಕ ನಿಮ್ಮ ನಾಯಕತ್ವ ಕೌಶಲಗಳನ್ನು ಹೆಚ್ಚಿಸಿಕೊಳ್ಳುವುದು.<br>• ಶಾಲೆಯಲ್ಲಿ ಕಲಿಕೆಯ ಸಾಧ್ಯಕರ್ತರಾಗಬಹುದಾದ ಅಂಶಗಳನ್ನು ಅರಿಯುವುದು. |
| | ಪ್ರೌಢ ಶಾಲೆ ನಾಯಕರು ಸಾಧ್ಯಕರ್ತಗಳಾಗುವುದು | • ನಿಮ್ಮ ಶಾಲಾ ಕೌಶಲಗಳ ಪುನಾರವಲೋಕನ ಮಾಡಿಕೊಂಡು ಸುಧಾರಣೆಯ ಕ್ಷೇತ್ರಗಳನ್ನು ಗುರ್ತಿಸಿಕೊಳ್ಳುವುದು<br>• ಟೆಸ್–ಇಂಡಿಯಾದ ಒ.ಇ.ಆರ್‌ಗಳನ್ನು ಬಳಸಿಕೊಂಡು ನಿಮ್ಮ ಕಲಿಕಾ ಮಾರ್ಗವನ್ನು ವಿನ್ಯಾಸಗೊಳಿಸುವುದು ಆ ಮೂಲಕ ನಿಮ್ಮ ನಾಯಕತ್ವ ಕೌಶಲಗಳನ್ನು ಹೆಚ್ಚಿಸಿಕೊಳ್ಳುವುದು<br>• ಶಾಲೆಯಲ್ಲಿ ಕಲಿಕೆಯ ಸಾಧ್ಯಕರ್ತರಾಗಬಹುದಾದ ಅಂಶಗಳನ್ನು ಅರಿಯುವುದು. |
| ನಾಯಕತ್ವದ ಬಗ್ಗೆ ದೃಷ್ಟಿಕೋನ | ನಿಮ್ಮ ಶಾಲೆಯ ಬಗ್ಗೆ ಒಂದು ಸಾಮಾನ್ಯ ಕಾಣ್ಕೆಯನ್ನು ನಿರ್ಮಿಸುವುದು | • ಹೇಗೆ ಶಾಲೆಯ ಸಾಮಾನ್ಯ ಕಾಣ್ಕೆ ಆ ಶಾಲೆಯ ದೈನಂದಿನ ಚಟುವಟಿಕೆಗಳನ್ನು ಸುಧಾರಿಸುತ್ತದೆ?<br>• ನಿಮ್ಮದೇ ಶಾಲೆಯ ಕಾಣ್ಕೆಯನ್ನು ಹೇಗೆ ರಚಿಸಬಹುದು?<br>• ಶಾಲೆಯ ಕಾಣ್ಕೆ ಅಭಿವೃದ್ಧಿ ಪಡಿಸುವಲ್ಲಿ ಸಂಬಂಧಿಸಿದ ಎಲ್ಲರನ್ನೂ ಒಳಗೊಳಿಸುವುದು ಹಾಗು ಅದು ಮಕ್ಕಳ ಕಲಿಕೆಯ ಮೇಲೆ ಏನು ಪರಿಣಾಮ ಬೀರುವುದು? |
| | ಶಾಲೆಯ ಸ್ವ ಪುನರಾವಲೋಕನವನ್ನು ಮುನ್ನಡೆಸುವುದು | • ಶಾಲೆಯ ಸ್ವ ಪುನರಾವಲೋಕನ ದಿಂದಾಗುವ ಪ್ರಯೋಜನಗಳು ಮತ್ತು ಹುಟ್ಟುವ ಸವಾಲುಗಳು<br>• ಶಾಲೆಯ ಸ್ವ–ಪುನರಾವಲೋಕನದ ಸ್ವರೂಪ ಮತ್ತು ಚಕ್ರ<br>• ಸ್ವ– ಪುನರಾವಲೋಕನಕ್ಕಾಗಿ ಗುಣಾತ್ಮಕ ಮತ್ತು ಸಂಖ್ಯಾತ್ಮಕ ದತ್ತಾಂಶಗಳ ಸಂಗ್ರಹಣಾ ವಿಧಾನಗಳೇನು? |
| | ಶಾಲಾ ಅಭಿವೃದ್ಧಿ ಯೋಜನೆಗಳನ್ನು ಮುನ್ನಡೆಸುವುದು | • ಪರಿಣಾಮಕಾರಿ ಶಾಲಾ ಯೋಜನೆ ಪ್ರಕ್ರಿಯೆಯ ಮುಖ್ಯ ಲಕ್ಷಣಗಳನ್ನು ತಿಳಿಯುವುದು<br>• ಶಾಲಾದ್ಯಾಂತ ಮಕ್ಕಳ ಕಲಿಕೆಯ ಸುಧಾರಣೆಗಾಗಿ ಯೋಜಿಸುವುದು<br>• ಶಾಲೆಯ ಎಲ್ಲಾ ಭಾಗಿದಾರರು |

| | | |
|---|---|---|
| | | ವಿಶೇಷವಾಗಿ ಶಾಲಾ ನಿರ್ವಹಣಾ ಸಮಿತಿಯವರನ್ನು – ಶಾಲಾ ಅಭಿವೃದ್ಧಿ ಯೋಜನೆ ತಯಾರಿಯಲ್ಲಿ ಪಾಲ್ಗೊಳ್ಳುವಂತೆ ತೊಡಗಿಸಿಕೊಳ್ಳುವುದು.<br>• ಮಕ್ಕಳ ಕೇಂದ್ರಿತ ಬದಲಾವಣೆಗಳು ಸಾಧ್ಯವಾಗುಂತೆ ಶಾಲಾ ಅಭಿವೃದ್ಧಿ ಯೋಜನೆಯನ್ನು ಬರೆಯುವುದು. |
| ಶಾಲಾ ನಾಯಕತ್ವದ ದೃಷ್ಟಿಕೋನ | ವಿಭಿನ್ನತೆಗಳ ದತ್ತಾಂಶಗಳನ್ನು ಉಪಯೋಗಿಸಿಕೊಂಡು ನಿಮ್ಮ ಶಾಲೆ ಸುಧಾರಿಸುವುದು | • ಎಲ್ಲಾ ವಿದ್ಯಾರ್ಥಿಗಳು ಪ್ರತಿ ವರ್ಷವೂ ಅತ್ಯುತ್ತಮವಾಗಿ ಕಲಿಕೆಯನ್ನು ಪಡೆದುಕೊಳ್ಳಲು ವಿಭಿನ್ನತೆಗಳ ಮಹತ್ವ<br>• ನಿಮ್ಮ ಶಾಲೆಯಲ್ಲಿ ಇರುವ ವಿಭಿನ್ನತೆ ಅರಿಯಲು ದತ್ತಾಂಶಗಳ ವಿಧಗಳು ಹಾಗು ದತ್ತಾಂಶ ಸಂಗ್ರಹಣೆ ಸ್ವಭಾವ.<br>• ಈ ಅಂಕಿ–ಅಂಶಗಳನ್ನು ಎಲ್ಲ ಮಕ್ಕಳ ಹೆಚ್ಚಿನ ಕಲಿಕಾ ಪರಿಣಾಮಕ್ಕಾಗಿ ಬಳಸುವುದು ಹಾಗು ಕ್ರಿಯಾ ಯೋಜನೆ ತಯಾರಿಸುವುದು<br>• ವಿಭಿನ್ನತೆ ಬಗ್ಗೆ ಇರುವ ದತ್ತಾಂಶ ಸಂಗ್ರಹಣೆಗಾಗಿ ಶಿಕ್ಷಕರು ಮತ್ತು ಸ್ಥಳೀಯ ಸಮುದಾಯದ ಪ್ರತಿನಿಧಿಗಳನ್ನು ಬಳಸಿಕೊಳ್ಳುವುದು |
| | ನಿಮ್ಮ ಶಾಲಾ ಯೋಜನೆ ಹಾಗು ಬದಲಾವಣೆಯನ್ನು ಮುನ್ನಡೆಸುವುದು | • ನಿಮ್ಮ ಶಾಲೆಯಲ್ಲಿ ಬದಲಾವಣೆಗೆ ಇರುವ ಆಂತರಿಕ ಹಾಗು ಹೊರಗಿನ ಚಾಲಕರನ್ನು ಗುರುತಿಸುವುದು.<br>• ಬದಲಾವಣೆಯ ಅನುಷ್ಠಾನದಲ್ಲಿ ಇರುವ ಸವಾಲುಗಳನ್ನು ಗುರುತಿಸುವುದು.<br>• ಯೋಜನೆಯ ತಯಾರಿ ಹಾಗು ಬದಲಾವಣೆಗಳನ್ನು ಅನುಷ್ಠಾನಗೊಳಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದು.<br>• ಶೈಕ್ಷಣಿಕ ನಾಯಕತ್ವದ ವಿವಿಧ ಮಾರ್ಗೋಪಾಯಗಳನ್ನು ಗುರುತಿಸಿಕೊಳ್ಳವುದು ಹಾಗು ನಿಮ್ಮ ಮಾರ್ಗೋಪಾಯಕ್ಕೆ ಹೊಂದಿಸಿಕೊಳ್ಳುವುದು.<br>• ಬದಲಾವಣೆಯ ಯೋಜನೆಗೆ ಸತತ ಪ್ರಯತ್ನ , ಪ್ರೋತ್ಸಾಹ ಹಾಗು ತಾವೇ ಮಾದರಿ ಯಾಗುವ ಮೂಲಕ ಇತರರನ್ನು ಹುರುದುಂಬಿಸುವುದು ಮತ್ತು ಪ್ರೇರೇಪಿಸುವುದು. |
| | ಬದಲಾವಣೆಯನ್ನು ನಿಮ್ಮ ಶಾಲೆಯಲ್ಲಿ ಅನುಷ್ಠಾನಿಸುವುದು | • ಬದಲಾವಣೆಯ ಸ್ವರೂಪ ಹಾಗು ಅದಕ್ಕೆ ಸಾರ್ವಜನಿಕ ಪ್ರತಿಕ್ರಿಯೆ<br>• ಬದಲಾವಣೆಯ ಕುರಿತು ಅತ್ಯಂತ ಪ್ರಮುಖ ಸಿದ್ಧಾಂತಗಳು; ಶಾಲೆಗಳಿಗೆ ಅವುಗಳ ಪ್ರಸ್ತುತತೆ.<br>• ಬೇರೆಯವರಿಂದ ಹಾಗು ಬೇರೆಯವರ ಜೊತೆಗೆ ಬದಲಾವಣೆ ತರಲು ಹೇಗೆ ಕೆಲಸ ಮಾಡಬೇಕು? |
| ನಿಮ್ಮ ಅಭಿವೃದ್ಧಿ ಮತ್ತು ನಿರ್ವಹಣೆ | ನೀವೇ ಅಭಿವೃದ್ಧಿಗಾಗಿ ನಿರ್ವಹಿಸಿಕೊಳ್ಳವುದು | • ನಿಮ್ಮ ಕೆಲಸದ ಮೂಲಕ ಅಭ್ಯಾಸ ಮಾಡವುದು , ಇತರರಿಗೆ ನಿಮ್ಮ ಕೆಲಸ ಹಂಚುವುದು , ಹಾಗು ನಿಮ್ಮ |

| | | |
|---|---|---|
| | | ಸಮಯದ ಪರಿಣಾಮಕಾರಿ ನಿರ್ವಹಣೆ ಮಾಡುವುದು.<br>• ನಿಮ್ಮ ವೈಯಕ್ತಿಕ ಹಾಗು ವೃತ್ತಿಪರ ಅಭಿವೃದ್ಧಿ ಯೋಜಿಸುವುದು.<br>•<br>• ನಿಮಗಾಗಿ SMART ಉದ್ದೇಶಗಳನ್ನು ರೂಪಿಸಿಕೊಳ್ಳುವುದು. |
| ಬೋಧನೆ ಮತ್ತು ಕಲಿಕೆಯ ಪರಿವರ್ತನೆ | ಪ್ರಾಥಮಿಕ ಶಾಲೆಗಳಲ್ಲಿ ಬೋಧನೆ ಮತ್ತು ಕಲಿಕೆಯಲ್ಲಿ ಬದಲಾವಣೆಗಳನ್ನು ಮುನ್ನಡೆಸುವುದು | • ಟೆಸ್ ಇಂಡಿಯಾ ಒ.ಇ.ಆರ್ ನ ರಚನೆ ಮತ್ತು ಮೂಲ ಶಿಕ್ಷಣ ಶಾಸ್ತ್ರಗಳನ್ನು ಪರಿಚಯಿಸಿಕೊಳ್ಳುವುದು<br>• ಒ.ಇ.ಆರ್‌ಗಳನ್ನು ನಿಮ್ಮ ಶಾಲೆಯಲ್ಲಿ ಅಳವಡಿಸಿಕೊಂಡರೆ ಆಗುವ ಲಾಭಗಳ ಬಗ್ಗೆ ಮೆಚ್ಚಿಕೊಳ್ಳಿ.<br>• ಕಲಿಕೆಯಲ್ಲಿ ನಿಮ್ಮ ವಿದ್ಯಾರ್ಥಿಗಳ ಭಾಗವಹಿಸುವಿಕೆ ಯಾವುದಾದರೊಂದಕ್ಕೆ ಗಮನ ನೀಡಿ.<br>• ಬೋಧನೆ ಮತ್ತು ಕಲಿಕೆ ಯಲಾದ ಸುಧಾರಣೆಗಳನ್ನೂ ಸ್ಥಿರಗೊಳಿಸಲು ವಿಚಾರಗಳು. |
| ಬೋಧನೆ – ಕಲಿಕೆಯಲ್ಲಿ ಪರಿವರ್ತನೆ | ಪ್ರೌಢಶಾಲೆಯಲ್ಲಿ ಬೋಧನಾ ಕಲಿಕೆಯ ಸುಧಾರಣೆ ಕುರಿತು ಮುನ್ನಡೆಸುವುದು | • ಟೆಸ್ ಇಂಡಿಯಾ ಒ.ಇ.ಆರ್ ನ ರಚನೆ ಮತ್ತು ಮೂಲ ಶಿಕ್ಷಣ ಶಾಸ್ತ್ರಗಳನ್ನು ಪರಿಚಯಿಸಿಕೊಳ್ಳುವುದು<br>• ಒ.ಇ.ಆರ್‌ಗಳನ್ನು ನಿಮ್ಮ ಶಾಲೆಯಲ್ಲಿ ಅಳವಡಿಸಿಕೊಂಡರೆ ಆಗುವ ಲಾಭಗಳ ಬಗ್ಗೆ ಮೆಚ್ಚಿಕೊಳ್ಳಿ<br>• ಕಲಿಕೆಯಲ್ಲಿ ನಿಮ್ಮ ವಿದ್ಯಾರ್ಥಿಗಳ ಭಾಗವಹಿಸುವಿಕೆ ಯಾವುದಾದರೊಂದಕ್ಕೆ ಗಮನ ನೀಡಿ<br>• ಬೋಧನೆ ಮತ್ತು ಕಲಿಕೆ ಯಲಾದ ಸುಧಾರಣೆಗಳನ್ನೂ ಸ್ಥಿರಗೊಳಿಸಲು ವಿಚಾರಗಳೂ |
| | ನಿಮ್ಮ ಶಾಲೆಯಲ್ಲಿ ಮೌಲ್ಯಮಾಪನವನ್ನು ಮುನ್ನಡೆಸುವುದು | • 'ಕಲಿಕೆಗಾಗಿ ಮೌಲ್ಯಮಾಪನ' ಹಾಗು 'ಮೌಲ್ಯಮಾಪನಕ್ಕಾಗಿ ಕಲಿಕೆ' ಇವುಗಳ ನಡುವಿನ ವ್ಯತ್ಯಾಸ ಗುರುತಿಸುವುದು<br>• ನಿಮ್ಮ ಶಾಲೆಯ ಶಿಕ್ಷಕರ ಜೊತೆಯಲ್ಲಿ ರಚನಾತ್ಮಕ ಮೌಲ್ಯ ಮಾಪನ ತಂತ್ರದ ಅಭಿವೃದ್ಧಿ ಪಡಿಸಲು ಮುನ್ನಡೆ ನೀಡುವುದು.<br>• ನಿಮ್ಮ ಶಿಕ್ಷಕರು ರಚನಾತ್ಮಕ ಮೌಲ್ಯಮಾಪನದಿಂದ ಲಭ್ಯವಾದ ದತ್ತಾಂಶಗಳು ಮತ್ತು ಸಾಕ್ಷಾದಾರಗಳನ್ನು ಬಳಸಿಕೊಂಡು ಮಕ್ಕಳಿಗೆ ಹಿಮ್ಮಾಹಿತಿ ನೀಡುವ ಮೂಲಕ ಅವರ ಕಲಿಕೆಯಲ್ಲಿ ಸುಧಾರಣೆಗೆ ತರಲು ಶಿಕ್ಷಕರಿಗೆ ಮಾರ್ಗದರ್ಶನ ನೀಡುವುದು. |
| | ಶಿಕ್ಷಕರ ಸಾಧನೆಯ ಉನ್ನತಿಗೆ ನೆರವು ನೀಡುವುದು. | • ಶಿಕ್ಷಕರ ಸಾಧನೆಯನ್ನು ಅಳೆಯುವುದು<br>• ಒಬ್ಬೊಬ್ಬರೇ ಶಿಕ್ಷಕರ ಸಾಧನೆ ಸುಧಾರಣೆಗೆ ಯೋಜನೆ ತಯಾರಿಸುವುದು<br>• ಅವರ ಆಚರಣೆಗಳ ಬಗ್ಗೆ ರಚನಾತ್ಮಕ ಸಭೆಗಳನ್ನು ಕುರಿತು ಕೆಲವು |

| | | |
|---|---|---|
| | | ಉಪಾಯಗಳು<br>• ಶಿಕ್ಷಕರ ಸಾಧನೆಗಳನ್ನು ಕಾಪಾಡಿಕೊಳ್ಳಲು ಕೆಲವು ಉಪಾಯಗಳು |
| | ಶಿಕ್ಷಕರ ವೃತ್ತಿಪರ ಅಭಿವೃದ್ಧಿ ಯನ್ನು ಮುನ್ನಡೆಸುವುದು | • ಶಿಕ್ಷಕರ ವೃತ್ತಿಪರ ಬೆಳವಣಿಗಿಯು ಹೇಗೆ ಮಕ್ಕಳ ಕಲಿಕೆ ಹಾಗೂ ಶಾಲಾ ಸುಧಾರಣೆ ಮೇಲೆ ಪರಿಣಾಮ ಬೀರುತ್ತದೆ?<br>• ಶಿಕ್ಷಕರೇ ತಮ್ಮ ವೃತ್ತಿಪರತೆ ಕೊರತೆಗಳನ್ನು ಕಂಡುಕೊಳ್ಳಲು ಕೆಲವು ವಿಚಾರಗಳು<br>• ಶಿಕ್ಷಕರಲ್ಲಿ ವೃತ್ತಿಪರತೆ ಬೆಳೆಸಲು ಯೋಜನೆ, ಮೇಲ್ವಿಚಾರಣೆ ಹಾಗು ಕಾರ್ಯ ಸಾಧ್ಯವಾಗಿಸುವಿಕೆ. |
| | ಆಪ್ತ ಸಲಹೆ ಹಾಗು ತರಬೇತಿ ನೀಡುವುದು | • ಆಪ್ತ ಸಲಹೆ ಮತ್ತು ತರಬೇತಿಯ ನಡುವೆ ಇರುವ ಭಿನ್ನತೆಗಳನ್ನು ಗುರುತಿಸುವುದು. ಮತ್ತು ಎರಡೂ ಹೇಗೆ ಸಿಬ್ಬಂದಿಗಳ ಕಲಿಕೆ ಗೆ ಪೂರಕವಾಗಬಲ್ಲದು ಎಂಬುದರ ಅರಿವು.<br>• ಸಿಬ್ಬಂದಿ ವರ್ಗದ ಸದಸ್ಯರೊಡನೆ ಸಂಭಾಷನೆ ಮೂಲಕ ಹೇಗೆ ನಿಮ್ಮ ಶಾಲೆಯ ಭೋದನೆ ಮತ್ತು ಕಲಿಕೆಯಲ್ಲಿ ಸುಧಾರಣೆ ತರಬಹುದು<br>• ಮೊದಲೇ ಗುರುತಿಸಿದ ಪ್ರತಿ ಫಲಗಳನ್ನು ಪಡೆಯಲು ಆಪ್ತ ಸಲಹೆ ಮತ್ತು ಕೋಚಿಂಗ್ ಅಧಿವೇಶನಗಳನ್ನು ಯೋಜಿಸಿ, ಅನುಷ್ಠಾನಗೊಳಿಸಲು.<br>• ನಿಮ್ಮ ಶಾಲೆಯಲ್ಲಿ ಕೋಚಿಂಗ್ ಸಂಸ್ಕೃತಿ ಯಿಂದಾಗುವ ಲಾಭಗಳ ಬಗ್ಗೆ ವಿಚಾರ ಮಾಡುವುದು. |
| ಬೋಧನೆ ಮತ್ತು ಕಲಿಕೆಯಲ್ಲಿ ಪರಿವರ್ತನೆ | ನಿಮ್ಮ ಶಾಲೆಯಲ್ಲಿ ಒಂದು ಪರಿಣಾಮಕಾರಿ ಕಲಿಕಾ ಸಂಸ್ಕೃತಿ ಯನ್ನು ಅಭಿವೃದ್ಧಿ ಪಡಿಸುವುದು | • ಶಾಲಾ ಸಂಸ್ಕೃತಿ ಎಂದರೇನು? ಹಾಗು ಅಂದು ಕಲಿಕೆಯ ಮೇಲೆ ಮಾಡುವ ಪರಿಣಾಮ<br>• ನಿಮ್ಮ ಶಾಲೆಯ ಸಂಸ್ಕೃತಿಯನ್ನು ಗುರುತಿಸಲು ಆರಂಭಿಸುವುದು.<br>• ಸರ್ವಸಮ್ಮತವಾದ ಒಂದು ಕಲಿಕಾ ಸಂಸ್ಕೃತಿ ಯನ್ನು ಬೆಳೆಸಲು ಕೆಲವು ಕಾರ್ಯತಂತ್ರಗಳು |
| | ನಿಮ್ಮ ಶಾಲೆಯಲ್ಲಿ ಎಲ್ಲರನ್ನೂ ಒಳಗೊಳ್ಳಿಸುವುದನ್ನು ಉತ್ತೇಜಿಸುವುದು. | • ವಿವಿಧತೆ , ಸಮತೆ ಹಾಗು ಒಳಗೊಳ್ಳುವಿಕೆ ಬಗ್ಗೆ ಒಂದು ಸರ್ವಸಮ್ಮತ ತಿಳುವಳಿಕೆ– ನಿಮ್ಮ ಸಿಬ್ಬಂದಿಯೊಂದಿಗೆ– ಅಭಿವೃದ್ಧಿ ಪಡಿಸವುದು.<br>• ನಿಮ್ಮ ಎಲ್ಲ ವಿದ್ಯಾರ್ಥಿಗಳ ಕಲಿಕಾ ಸುಧಾರಣೆಗೆ ಕ್ರಿಯೆಗಳನ್ನು ಆಧ್ಯತೀಕರಿಸುವುದು.<br>• ನಿಮ್ಮ ಶಾಲೆಯಲ್ಲಿರುವ ಬಹಿಷ್ಕರಣೆ, ಅನನಕೂಲತೆಗಳ, ಆಚರಣೆಗಳ ನಿವಾರಣೆ ಕುರಿತು ಜಂಟಿ ಕಾರ್ಯಾಚರಣೆಗಳನ್ನು ಯೋಜಿಸುವುದು ಮತ್ತು ಅನುಷ್ಠಾನಕ್ಕೆ |

| | | |
|---|---|---|
| | | ತರುವುದು<br>• ಈ ನಿಮ್ಮ ಕಾರ್ಯಾಚರಣೆಯ ಪರಿಣಾಮ ಇದರ ಮೌಲ್ಯಮಾಪನದ ಮಹತ್ವ. |
| | ವಿದ್ಯಾರ್ಥಿಗಳ ಪರಿಣಾಮಕಾರಿ ಕಲಿಕೆಗೆ ಸಂಪನ್ಮೂಲಗಳ ನಿರ್ವಹಣೆ | • ನಿಮ್ಮ ಶಾಲೆಯ ಒಳಗೆ ಹಾಗು ಹೊರಗೆ ದೊರೆಯಬಹುದಾದ ಸಂಪನ್ಮೂಲಗಳ ಬಗ್ಗೆ ವಿಶಾಲವಾದ ತಿಳುವಳಿಕೆ .<br>• ಇದ್ದೂ, ಸಮರ್ಪಕವಾಗಿ ಬಳಕೆಯಾಗದಿರುವ ಸಂಪನ್ಮೂಲಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ನಿಮ್ ಶಾಲೆಯ ಸಂಪನ್ಮೂಲಗಳನ್ನು ಗುರುತಿಸುವುದು.<br>• ಶಿಕ್ಷಕರನ್ನು ಎಲ್ಲ ಸಂಪನ್ಮೂಲಗಳ ಸರಿಯಾದ ಬಳಕೆ ಹಾಗು ಆ ಮೂಲಕ ಮಕ್ಕಳ ಕಲಿಕೆಯಾಗುವುದನ್ನು ಖಾತ್ರಿ ಪಡಿಸಿಕೊಳ್ಳುವುದಕ್ಕೆ ತಾಕೀತು ಮಾಡುವುದು.<br>• ಎಲ್ಲ ಸಂಪನ್ಮೂಲಗಳ ಪರಿಣಾಮಕಾರಿ ಬಳಕೆಗೆ ಒಂದು ಯೋಜನೆ ತಯಾರು ಮಾಡುವುದು. |
| | ನಿಮ್ಮ ಶಾಲೆಯಲ್ಲಿ ತಂತ್ರಜ್ಞಾನ ಬಳಕೆಗೆ ಮುನ್ನಡೆ ನೀಡುವುದು | • ಶಾಲೆಯಲ್ಲಿ ಬಳಸಬಹುದಾದ ಎಲ್ಲ ತಾಂತ್ರಿಕತೆಯ ಬಗ್ಗೆ ಒಳನೋಟ ಪಡೆಯುವುದು.<br>• ಮಾಹಿತಿ ಹಾಗು ಸಂಹವನ ತಂತ್ರಜ್ಞಾನ ಸೃಜನಾತ್ಮಕ ಬಳಕೆಯ ಬಗ್ಗೆ ವಿಚಾರ ಮಾಡುವುದು.<br>• ಅಂತರ್‌ಜಾಲ ಮುಖೇನ ನಿಮ್ಮ ಕಲಿಕೆಗೆ ನೆರವು ಪಡೆಯುವುದು.<br>• ನಿಮ್ಮ ಶಿಕ್ಷಕರು ಸಹ ಅಂತರ್‌ಜಾಲ ಮುಖೇನ ಅವರ ಕಲಿಕೆಯನ್ನು ವೃದ್ಧಿಪಡಿಸಿಕೊಳ್ಳಲು ನೆರವು ನೀಡುವುದು |
| ಪಾಲುದಾರಿಕೆಯನ್ನು ಮುನ್ನಡೆಸುವುದು | ಪೋಷಕರು ಮತ್ತು ವಿಸ್ತೃತ ಸಮುದಾಯವನ್ನು ತೊಡಗಿಸಿಕೊಳ್ಳುವುದು | • ನಿಮ್ಮ ರಾಜ್ಯದಲ್ಲಿರುವ ಅತೀ ಪ್ರಮುಖ ಸಂಸ್ಥೆಗಳೊಂದಿಗೆ ಸಂಬಂಧಗಳನ್ನು ನಿರ್ಮಿಸಿಕೊಳ್ಳುವುದು<br>• ನಿಮ್ಮ ಸುತ್ತಲಿನ ಶಾಲೆಗಳೊಂದಿಗೆ ಹಾಗು ಇತರೆ ಸರ್ಕಾರೇತರ ಸಂಸ್ಥೆಗಳೊಂದಿಗೆ ಸಹಯೋಗಿ ಪಾಲುದಾರಿಕೆಗಳನ್ನು ಬೆಳೆಸಿಕೊಳ್ಳುವದು<br>• ಶಾಲಾ ಅಭಿವೃದ್ಧಿ ಸಮಿತಿ ಹಾಗು ಇತರೆ ಸಮುದಾಯ ಆಧಾರಿತ ಸಂಘ ಸಂಸ್ಥೆಗಳೊಂದಿಗೆ ತೊಡಗಿಸಿಕೊಳ್ಳುವುದು<br>• ಮಕ್ಕಳ ಕಲಿಕಾ ಸುಧಾರಣೆಗಾಗಿ ಪೋಷಕರೊಂದಿಗೆ ಕೈ ಜೋಡಿಸುವುದು |

**ಸಂಪನ್ಮೂಲ –4 ತಖ್ತೆ: 4.1 ಕಲಿಕಾ ಯೋಜನೆಯ ಮಾದರಿ:**

***Table R4.1*** *Learning Plan template.*

| |
|---|
| ಮುಂದಿನ ಶೈಕ್ಷಣಿಕ ವರ್ಷದಲ್ಲಿ ನಿಮ್ಮ ಆದ್ಯತೆಗಳು ಹಾಗು ಬದ್ಧತೆಗಳು. (ಇದರಲ್ಲಿ ಕೋರ್ಸಗಳು, ನೀವು ತೊಡಗಿಸಿ ಕೊಂಡಿರುವ ಬೇರೆ ಬೇರೆ ಕಾರ್ಯಕ್ರಮಗಳು, ಸಾಧಿಸಬೇಕಿರುವ ಕೆಲಸಗಳು– ಶಾಲಾ |

| ಪುನರಾವಲೋಕನ ಇತ್ಯಾದಿ) ಎಲ್ಲವನ್ನು ಬರೆಯಿರಿ. |
|---|
| |

| ಅಭ್ಯಸಿ ಬೇಕಾದ ಒ.ಇ.ಆರ್‌ಗಳು (ಮುಂದಿನ 3 ತಿಂಗಳಲ್ಲಿ) |
|---|
| 1.<br>2.<br>3. |

| ಮುಂದಿನ ವರ್ಷದಲ್ಲಿ ಅಭ್ಯಸಿಸಬೇಕಾದ ಒ.ಇ.ಆರ್. ಗಳು |
|---|
| 1.<br>2.<br>3.<br>4.<br>5. |

| ನಾನು ಈ ಎಲ್ಲ ಕಲಿಕೆಗೆ ಹೇಗೆ ಸಮಯ ನೀಡುವೆ? |
|---|
| |

| ಈ ನನ್ನ ಯೋಜನೆಯಲ್ಲಿ ಬರುವ ಅಡ್ಡಿಗಳೇನು? |
|---|
| |

| ನನ್ನ ಯೋಜನೆಗಳನ್ನು ವಿನಾಶದಿಂದ ನಾನು ಹೇಗೆ ತಪ್ಪಿಸಬಹುದು? |
|---|
| |

| ಈ ಎಲ್ಲ ಘಟಕಗಳನ್ನು ನಾನು ಹೇಗೆ ಪಡೆಯುವೆ? |
| --- |
| |

| ನಾನು ನನ್ನ ಕಲಿಕೆಯನ್ನು ಮಾಡಲು ಆಪ್ತ – ಸಲಹೆಗಾರರನ್ನು ಅಥವಾ ಜೊತೆಗಾರರನ್ನು ಹೇಗೆ ಹುಡುಕುವೆ? ಎಷ್ಟು ಬಾರಿ ಅವರನ್ನು ಸಂಪರ್ಕಿಸುವೆ? ಸಂವಾದ ನಡೆಸುವೆ? |
| --- |
| |

| ನನ್ನ ಕಲಿಕೆಯನ್ನು ನಾನು ಹೇಗೆ ಮೌಲ್ಯ ಮಾಪನ ಮಾಡುವೆ? |
| --- |
| |

# ಹೆಚ್ಚಿನ ಸಂಪನ್ಮೂಲಗಳು

- National Centre for School Leadership: http://www.nuepa.org/ncsl.html

# ಆಕರಗಳು/ಗ್ರಂಥಸೂಚಿಗಳು


Bruner, J. (1996)*The Culture of Education*. London: Harvard University Press.

Gardner, H. (1997) *Leading Minds: An Autonomyof Leadership*. London: HarperCollins.

Lave, J. and Wenger, E. (1991)*Situated Learning: Legitimate Peripheral Participation*.New York, NY: Cambridge University Press.

MacBeath, J. (1998) *Effective School Leadership: Responding to Change*. London: Paul Collins.

MacBeath, J. and Myers, K.(1999) *Effective School Leaders: How to Evaluate and Improve Your Practice*. Harlow: Pearson.

Shulman, L.S. and Shulman, J.H. (2007) 'How and what teachers learn: a shifting perspective', *Journal of Curriculum Studies*,vol. 36, no. 2, pp. 257–71. Available from: http://www.peaunesco.com.br/encontro2013/SHULMAN_How%20and%20What%20Teachers%20Learn_(JrCurriculumStudies_2004).pdf (accessed 27 January 2015).

Tyagi, R.S. (2011) *Academic Supervision in Secondary Schools: School-based Approach for Quality Management*. New Delhi: NUPEA.

Wenger, E. (1998)*Communities of Practice: Learning, Meaning and Identity*. New York, NY: Cambridge University Press.

# ಧನ್ಯವಾದಗಳು

Except for third party materials and otherwise stated below, this content is made available under a Creative Commons Attribution-ShareAlike licence (http://creativecommons.org/licenses/by-sa/3.0/). The material acknowledged below is Proprietary and used under licence for this project, and not subject to the Creative Commons Licence. This means that this material may only be used unadapted within the TESS-India project and not in any subsequent OER versions. This includes the use of the TESS-India, OU and UKAID logos.

Grateful acknowledgement is made to the following sources for permission to reproduce the material in this unit:

Table 1: adapted from: Gardner, H. (1997) *Leading Minds: An Autonomy of Leadership*. London: HarperCollins.

Table 2: adapted from Shulman, L.S. and Shulman, J.H. (2007) 'How and what teachers learn: a shifting perspective', *Journal of Curriculum Studies*, vol. 36, no. 2, pp. 257–71.

Table R2.1: adapted from: MacBeath, J. and Myers, K. (1999) *Effective School Leaders: How to Evaluate and Improve Your Practice*. Harlow: Pearson.

Every effort has been made to contact copyright owners. If any have been inadvertently overlooked the publishers will be pleased to make the necessary arrangements at the first opportunity.

Video (including video stills): thanks are extended to the teacher educators, headteachers, teachers and students across India who worked with The Open University in the productions.